ಸಂಪಾದಕರು: ರವಿಕುಮಾರ್ ಸಿ.ಹೆಚ್.

RNI: KARKAN/2021/80805

ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

ಸೂರ್ಯ ಪ್ರಗತಿ

SURYA PRAGATHI Kannada daily

ಡಿಜಿಟಲ್ ನ್ಯೂಸ್ ಕಹಾನಿ

ಪ್ರತಿ ಸುದ್ದಿಯ ಧ್ವನಿ

suryapragathidailynews@gmail.com 9901010109 L2/RNP-1285/TMR/2025-27

Volume: 05 Issue:155 ಸಂಪುಟ: 05 ಸಂಚಿಕೆ: 155 Date:07-07-2026 Tuesday RNI NO : KARKAN/2021/80805 L2/RNP-1285/TMR/2025-27 Page :4 ಪುಟ : 4 Price: 1.00 ಬೆಲೆ: 1.00 ರೂ

ಗೃಹ ಸಚಿವ ಪ್ರಿಯಾಂಕ್ ಖರ್ಗೆನಂತರ KPCC ಅಧ್ಯಕ್ಷ ಬಿ.ಕೆ.ಹರಿಪ್ರಸಾದ್‌ಗೆ ಲೀಗಲ್ ನೋಟಿಸ್; ಆರ್‌ಎಸ್‌ಎಸ್ ಪಥಸಂಚಲನ ಅನುಮತಿ ಕಡ್ಡಾಯ

ಬೆಂಗಳೂರು: RSS ಸ್ವಯಂಸೇವಕರೊಬ್ಬರು ದಾಖಲಿಸಿದ್ದ ಕ್ರಿಮಿನಲ್ ಮಾನನಷ್ಟ ದೂರನ್ನು ಪರಿಗಣಿಸಿದ ವಿಶೇಷ ನ್ಯಾಯಾಧೀಶ ಸಂದೀಪ್ ಪಾಟೀಲ್ ಅವರು, ಗೃಹ ಸಚಿವ ಪ್ರಿಯಾಂಕ್ ಖರ್ಗೆಗೆ ನೋಟಿಸ್ ನೀಡಿದ್ದರು. ಇದರ ಬೆನ್ನಲ್ಲೇ ಇದೀಗ KPCC ಅಧ್ಯಕ್ಷ ಬಿ.ಕೆ.ಹರಿಪ್ರಸಾದ್‌ಗೆ ಲೀಗಲ್ ನೋಟಿಸ್ ನೀಡಲಾಗಿದೆ.

ಉಃಂ ಚುನಾವಣಾ ಬಿಜೆಪಿ ಉಸ್ತುವಾರಿ ರಾಮ್ ಮಾಧವ್ ಅವರು, ಪಾಕ್ ಅಧಿಕಾರಿಗಳ ಜೊತೆ ಗೌಪ್ಯಸಭೆ ನಡೆಸಿದ್ದಾರೆ ಎಂದು ಬಿಕೆ ಹರಿಪ್ರಸಾದ್ ಆರೋಪಿಸಿದ್ದರು. ಬಿಕೆ ಹರಿಪ್ರಸಾದ್ ಹೇಳಿಕೆ ಹಿನ್ನೆಲೆಯಲ್ಲಿ ಬಿಜೆಪಿಗರು ಕೋರ್ಟ್ ಮೆಟ್ಟಿಲೇರಿದ್ದರು. ರಾಮ್ ಮಾಧವ್ ಹೆಸರಿಗೆ ಕಪ್ಪು ಮಸಿ ಬಳಿಯಲು ಪ್ರಯತ್ನಿಸಿರುವುದಲ್ಲದೆ ಅವರ ಇಮೇಜ್ ಮತ್ತು ಖ್ಯಾತಿಯನ್ನು ಕುಗ್ಗಿಸಲು ಹೇಳಿಕೆ ನೀಡಲಾಗಿದೆ ಎಂದು ಆರೋಪಿಸಿ ಬಿಎನ್‌ಎಸ್ ಸೆಕ್ಷನ್ 356ರ ಅಡಿಯಲ್ಲಿ ನೋಟಿಸ್ ನೀಡಲಾಗಿದೆ. ಇನ್ನು ಹರಿಪ್ರಸಾದ್ ಅವರು, ರಾಮ್ ಮಾಧವ್‌ಗೆ ಕ್ಷಮೆ ಕೇಳಬೇಕೆಂದು ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ.

ಹಿಲ್ಟನ್ ಹೋಟೆಲ್‌ನಲ್ಲಿ ಪಾಕ್ ಖಖಖ ಮಾಜಿ ಮೇಜರ್ ಜನರಲ್ ಜೊತೆ ರಾಮ್ ಮಾಧವ್ ರಹಸ್ಯ ಮೀಟಿಂಗ್ ನಡೆಸಿದ್ದು, ಗೌಪ್ಯ ಸಭೆಯಲ್ಲಿ ಏನು ಮಾತಾಡಿದ್ದಾರೆಂದು ಸ್ಪಷ್ಟ ಪಡಿಸಬೇಕು. ಅಲ್ಲದೆ ಕೊಲಂಬೋ ಹಾಗೂ ಲಂಡನ್‌ನಲ್ಲೂ 4 ಸಭೆಗಳನ್ನು ಮಾಡಿದ್ದಾರೆ. ವಿದೇಶಿ ವ್ಯವಹಾರಗಳನ್ನು ವಿದೇಶಾಂಗ ಸಚಿವಾಲಯ ನೋಡಿಕೊಳ್ಳುತ್ತದೆ. ಆದರೆ ರಹಸ್ಯ ಸಭೆ ನಡೆಸಲು ನಿಮಗೆ ಯಾರು ಅಧಿಕಾರ ಕೊಟ್ಟಿದ್ದಾರೆ? ಎಂದು ಹರಿಪ್ರಸಾದ್ ಪ್ರಶ್ನಿಸಿದ್ದರು.

ನಾನು ಇರೋವರೆಗೂ ರಾಜ್ಯದಲ್ಲಿ ಪಥಸಂಚಲನಕ್ಕೆ ಅನುಮತಿ ಕಡ್ಡಾಯ; ಪ್ರಿಯಾಂಕ್ ಖರ್ಗೆ ಖಡಕ್ ಸೂಚನೆ

ನಾನು ಗೃಹಸಚಿವನಾಗಿ ಇರುವವರೆಗೂ ರಾಜ್ಯದಲ್ಲಿ ಆರ್‌ಎಸ್‌ಎಸ್ ಪಥಸಂಚಲನಕ್ಕೆ ಅನುಮತಿ ಕಡ್ಡಾಯ ಎಂದು ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಹಾಗೂ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ನಡುವಿನ ಸಂಘರ್ಷ ಹೊಸ ತಿರುವು ಪಡೆದುಕೊಂಡಿದೆ. ಅವಕಾಶ ಸಿಕ್ಕಾಗಲೆಲ್ಲಾ ಆರ್.ಎಸ್.ಎಸ್ ವಿರುದ್ಧ ವಾಗ್ದಾಳಿ ನಡೆಸುವ ಸಚಿವ ಪ್ರಿಯಾಂಕ್ ಖರ್ಗೆ ಇದೀಗ ಸಂಘಕ್ಕೆ ಮತ್ತೊಂದು ಬಿಗ್ ಶಾಕ್ ನೀಡಿದ್ದಾರೆ. ನಾನು ಸಚಿವನಾಗಿ ಇರುವವರೆಗೂ ರಾಜ್ಯದಲ್ಲಿ ಆರ್‌ಎಸ್‌ಎಸ್ ಪಥಸಂಚಲನ ನಡೆಸಲು ಅನುಮತಿ ಪಡೆಯುವುದು ಕಡ್ಡಾಯ ಎಂದು ಎಚ್ಚರಿಕೆ ನೀಡಿದ್ದಾರೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘ ಮತ್ತು ಕರ್ನಾಟಕ ಸರ್ಕಾರದ ನಡುವೆ ಮತ್ತೊಂದು ಹೊಸ ಸಮರ ಆರಂಭವಾಗುವ ಎಲ್ಲ ಲಕ್ಷಣಗಳೂ ಗೋಚರಿಸಿವೆ.

ಕಲಬುರಗಿಯ ಮಾತನಾಡಿದ ಪ್ರಿಯಾಂಕ್ ಖರ್ಗೆ, ನಾನು ಈಗಾಗಲೇ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರಿಗೆ ಪತ್ರ ಬರೆದಿದ್ದೇನೆ. 100 ವರ್ಷದ ಹಳೆಯ ಸಂಘಟನೆ ಅಂತಾರಲ್ಲ, ನಿಮ್ಮ ಸಂಘಟನೆಯ ದಾಖಲೆಗಳು ಎಲ್ಲಿವೆ? ಪಥಸಂಚಲನ ನಡೆಸಲು ನೀವು ಕಡ್ಡಾಯವಾಗಿ ಅನುಮತಿ ಪಡೆಯಲೇಬೇಕು. ದಾಖಲೆಗಳು ಎಲ್ಲೋ ಇರಬಹುದು, ಹುಡುಕಿಕೊಂಡು ಬರಲಿ. ಅಲ್ಲಿಯವರೆಗೆ ಸುಮ್ಮನೆ ಬಿಡಲ್ಲ ಎಂದು ಲೇವಡಿ ಮಾಡಿದ್ದಾರೆ.

ಘಟನೆಯ ಬಗ್ಗೆ ಪ್ರಶ್ನಿಸಿದ್ದಕ್ಕೆ ಬಿಜೆಪಿ ಮತ್ತು ಆರ್‌ಎಸ್‌ಎಸ್ ಬೆಂಬಲಿಗರು ನನ್ನ ವೈಯಕ್ತಿಕ ವಿಚಾರಗಳನ್ನು ಕೆದಕುತ್ತಿದ್ದಾರೆ ಎಂದು ಪ್ರಿಯಾಂಕ್ ಆಕ್ರೋಶ ವ್ಯಕ್ತಪಡಿಸಿದರು. ಪ್ರಿಯಾಂಕ್ ಯಾರನ್ನ ಮದುವೆಯಾಗಿದ್ದಾನೆ? ಆತನ ಮಕ್ಕಳು ಯಾರು? ಪ್ರಿಯಾಂಕ್ ಕಪ್ಪಗಿದ್ದಾನಾ ಅಥವಾ ಬೆಳ್ಳಗಿದ್ದಾನಾ? ಎಂದು ಕೆದಕುತ್ತಿದ್ದಾರೆ.

ಅವರು ಎಷ್ಟೇ ಕೆದಕಿದರೂ ನಾನು ಹೆದರುವ ವ್ಯಕ್ತಿಯಲ್ಲ. ನನ್ನ ಬಣ್ಣದ ಬಗ್ಗೆ ಮಾತನಾಡುವವರಿಗೆ ನನ್ನ ಕೆಲಸಗಳೇ ಉತ್ತರ ನೀಡುತ್ತವೆ ಎಂದು ಸವಾಲು ಹಾಕಿದ್ದಾರೆ.

ಕರ್ನಾಟಕದಲ್ಲಿ ಗ್ರಾಮೀಣಾಭಿವೃದ್ಧಿ ಯೋಜನೆಗಳ ಅನುಷ್ಠಾನ ಶ್ಲಾಘಿಸಿದ ಕೇಂದ್ರ ಸರ್ಕಾರದ ನಿಯೋಗ!

ಕರ್ನಾಟಕಕ್ಕೆ ಸೋಮವಾರ ಭೇಟಿ ನೀಡಿರುವ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಉನ್ನತ ಮಟ್ಟದ ನಿಯೋಗ, ಭಾರತ ಸರ್ಕಾರದ ಪ್ರಮುಖ ಗ್ರಾಮೀಣಾಭಿವೃದ್ಧಿ ಯೋಜನೆಗಳ ಅನುಷ್ಠಾನವು ರಾಜ್ಯದಲ್ಲಿ ಸುಗಮವಾಗಿ ನಡೆಯುತ್ತಿದೆ ಎಂದು ಹೇಳಿದೆ. ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯವು, ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ರಾಜ್ಯಕ್ಕೆ ಅಗತ್ಯವಿರುವ ಎಲ್ಲಾ ಬೆಂಬಲವನ್ನು ನೀಡುವುದನ್ನು ಮುಂದುವರಿಸುತ್ತದೆ ಎಂದು ಅವರು ಹೇಳಿದರು.

ಯುವಜನತೆ ಮಾದಕ ವ್ಯಸನದಿಂದ ದೂರವಿರಿ: ವಿಕಸಿತ ಭಾರತ ನಿರ್ಮಾಣಕ್ಕೆ ಕೈಜೋಡಿಸಿ : ಎಸ್.ಪಿ.ಅಶೋಕ್

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಯುವಕರು ಹಾಗೂ ವಿದ್ಯಾರ್ಥಿಗಳು ಮಾದಕ ವಸ್ತುಗಳಿಂದ ದೂರವಿದ್ದು ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳಬೇಕು ಎಂದು ತುಮಕೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಶೋಕ್ ಕೆ.ವಿ.ರವರು ತಿಳಿಸಿದರು.

ನಗರದ ಶಿರಾರಸ್ತೆಯ ಶ್ರೀದೇವಿ ಸಮೂಹ ವಿದ್ಯಾಸಂಸ್ಥೆ, ಪೊಲೀಸ್ ಮಾರ್ಷಲ್ಸ್, ಆರೋಹನ್ ಫೌಂಡೇಷನ್ ಇವರುಗಳ ಸಂಯುಕ್ತಾಶ್ರಯದಲ್ಲಿ "ನಶಾ ಮುಕ್ತ ಭಾರತ ಅಭಿಯಾನ" ಕುರಿತು ಕಾರ್ಯಾಗಾರವನ್ನು ಜುಲೈ 6 ರಂದು ಸೋಮವಾರ 11 ಗಂಟೆಗೆ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಆಡಿಟೋರಿಯಂ ಸಭಾಂಗಣದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಾಗಾರವನ್ನು ಉದ್ಘಾಟಿಸಿದ್ದ ಪೊಲೀಸ್ ವರಿಷ್ಠಾಧಿಕಾರಿ ಅಶೋಕ್ ಕೆ.ವಿ.ರವರು ಮಾತನಾಡುತ್ತಾ ಮಾದಕ ವಸ್ತುಗಳ ವ್ಯಸನವು ವ್ಯಕ್ತಿಯ ಆರೋಗ್ಯ, ಶಿಕ್ಷಣ, ಉದ್ಯೋಗ ಹಾಗೂ ಕುಟುಂಬದ ಮೇಲೆ ಗಂಭೀರ ದುಷ್ಪರಿಣಾಮ ಬೀರುತ್ತದೆ ಎಂದು ಅರ್ಥಪೂರ್ಣವಾಗಿ ವಿವರಿಸಿದರು.

ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿದ್ದ ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್‌ರವರು ಮಾತನಾಡುತ್ತಾ "ವಿಕಸಿತ ಭಾರತ 2047 ಕನಸು–ನನಸು ಮಾಡಲು ಯುವಜನತೆ ಪ್ರಮುಖ ಶಕ್ತಿಯಾಗಿದ್ದು, ವಿದ್ಯಾರ್ಥಿಗಳು ಶಿಸ್ತು, ಜವಾಬ್ದಾರಿ ಮತ್ತು ಉತ್ತಮ ನಡವಳಿಕೆಯನ್ನು ಬೆಳೆಸಿಕೊಳ್ಳಬೇಕು. ಮಾದಕ ವಸ್ತುಗಳ ದುರುಪಯೋಗ ಮತ್ತು ಕಳ್ಳಸಾಗಣೆ ಸಮಾಜಕ್ಕೆ ಗಂಭೀರ ಅಪಾಯವಾಗಿದ್ದು, ಅವುಗಳನ್ನು ತಡೆಗಟ್ಟಲು ಪೊಲೀಸ್ ಇಲಾಖೆ, ವಿದ್ಯಾರ್ಥಿ ಪೊಲೀಸ್ ಮಾರ್ಷಲ್, ಸ್ವಯಂಸೇವಕರು ಹಾಗೂ ಶಿಕ್ಷಣ ಸಂಸ್ಥೆಗಳು ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಬೇಕು. ಉತ್ತಮ ಶಿಕ್ಷಣದ ಮೂಲಕ ವೈದ್ಯರು, ಇಂಜಿನಿಯರ್‌ಗಳು, ಶಿಕ್ಷಕರು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿ ದೇಶದ ಅಭಿವೃದ್ಧಿಗೆ ಕೊಡುಗೆ ನೀಡುವಂತೆ ವಿದ್ಯಾರ್ಥಿಗಳಿಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಆರೋಹನ್ ಫೌಂಡೇಷನ್ ನಿರ್ದೇಶಕರ ವಿನಯ್‌ರವರು ಮಾತನಾಡುತ್ತಾ "ಭಾರತ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರವಾಗಿದ್ದರೂ ಮಾದಕ ವಸ್ತುಗಳ ದುರುಪಯೋಗ, ಸೈಬರ್ ಅಪರಾಧ, ತಂಬಾಕು ಬಳಕೆ ಹಾಗೂ ಯುವಜನರಲ್ಲಿ ಹೆಚ್ಚುತ್ತಿರುವ ಅಪರಾಧಗಳು ದೇಶದ ಪ್ರಮುಖ ಸವಾಲುಗಳಾಗಿವೆ. ಸೈಬರ್ ವಂಚನೆಗೆ ಒಳಗಾದರೆ ತಕ್ಷಣ 1930 ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿ ದೂರು ದಾಖಲಿಸಬೇಕು ಎಂದು ತಿಳಿಸಿದರು. ಪೊಲೀಸ್ ಠಾಣೆಯ ಕಾರ್ಯವೈಖರಿ, ಎಫ್‌ಐಆರ್, ತುರ್ತು ಸೇವೆಗಳ ಕುರಿತು ಸಾರ್ವಜನಿಕರು ಅರಿವು ಹೊಂದಿರಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧವಾಗಿದ್ದು, ಶಾಲೆಗಳ 100 ಮೀಟರ್ ವ್ಯಾಪ್ತಿಯಲ್ಲಿ ತಂಬಾಕು ಮತ್ತು ಸಿಗರೇಟ್ ಮಾರಾಟ ಕಾನೂನುಬಾಹಿರವಾಗಿದೆ. ಮಾದಕ ವಸ್ತುಗಳು ಹಾಗೂ ಸೈಬರ್ ಅಪರಾಧಗಳಿಂದ ದೂರವಿದ್ದು ಜವಾಬ್ದಾರಿಯುತ ನಾಗರಿಕರಾಗುವಂತೆ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಪುರುಷೋತ್ತಮ್‌ರವರು ಮಾತನಾಡುತ್ತಾ "ಖಾದಿ, ಖಾವಿ ಎಲ್ಲರೂ ಧರಿಸಬಹುದು, ಆದರೆ ಖಾಕಿ ಉಡುಪು ಧರಿಸುವುದು ಎಲ್ಲರಿಂದಲೂ ಸಾಧ್ಯವಿಲ್ಲ. ಸಮಾಜದಿಂದ ಮಾದಕ ವಸ್ತುಗಳನ್ನು ನಿರ್ಮೂಲನೆ ಮಾಡಲು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಪೊಲೀಸ್ ಇಲಾಖೆಯೊಂದಿಗೆ ಕೈಜೋಡಿಸಬೇಕು" ಎಂದರು.

ಕಾರ್ಯಕ್ರಮದಲ್ಲಿ ರಾಜಕಾರಣಿ ಮತ್ತು ಮಾಜಿ ಸಂಸದ, ಮಾಜಿ ಪತ್ರಕರ್ತೆ ತೇಜಸ್ವಿನಿ ಗೌಡರವರು ಮಾತನಾಡುತ್ತಾ ತಮ್ಮ ಹೋರಾಟದ ಬದುಕಿನ ಅನುಭವವನ್ನು ಹಂಚಿಕೊಂಡರು. ಕಠಿಣ ಪರಿಶ್ರಮ, ಆತ್ಮವಿಶ್ವಾಸ ಮತ್ತು ನಿರಂತರ ಕಲಿಕೆಯೇ ಯಶಸ್ಸಿನ ಗುಟ್ಟು, "ಶ್ರೇಷ್ಠ ಭಾರತ, ಆರೋಗ್ಯವಂತ ಭಾರತ ನಿರ್ಮಾಣಕ್ಕೆ ಯುವಜನತೆ ದುಶ್ಚಟಗಳಿಂದ ದೂರವಿದ್ದು ಉತ್ತಮ ಶಿಕ್ಷಣ, ಉತ್ತಮ ಚಿಂತನೆ ಹಾಗೂ ದೃಢ ಸಂಕಲ್ಪವನ್ನು ಬೆಳೆಸಿಕೊಳ್ಳಬೇಕು. ಮಾದಕ ವಸ್ತುಗಳು ವಿದ್ಯಾರ್ಥಿಗಳು, ಪೋಷಕರು ಮತ್ತು ದೇಶದ ಭವಿಷ್ಯವನ್ನೇ ಹಾಳು ಮಾಡುತ್ತವೆ. ಜ್ಞಾನ, ಕರುಣೆ ಮತ್ತು ಉತ್ತಮ ವ್ಯಕ್ತಿತ್ವದ ಮೂಲಕ ಸಮಾಜಕ್ಕೆ ಕೊಡುಗೆ ನೀಡಬೇಕು" ಎಂದು ಹೇಳಿದರು.

ಇದೇ ಸಂದರ್ಭದಲ್ಲಿ "ನಶಾ ಮುಕ್ತ ಭಾರತ ಅಭಿಯಾನ ಜಾಗೃತಿ ಮೂಡಿಸುವ ಉದ್ದೇಶದಿಂದ ಕ್ಯೂಆರ್ ಕೋಡ್‌ನ್ನು ಅತಿಥಿಗಳು ಬಿಡುಗಡೆಗೊಳಿಸಿದರು. ಇದೇ ಸಂದರ್ಭದಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಗೋಪಾಲ್, ಆರೋಹನ್ ಫೌಂಡೇಷನ್ ಸಹ ನಿರ್ದೇಶಕಿ ಮಾನಿಶ್ ಭಟ್, ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ನಿರ್ದೇಶಕ ಹಾಗೂ ಟ್ರಸ್ಟಿಯಾದ ಡಾ. ರಮಣ್ ಎಂ. ಹುಲಿನಾಯ್ಕರ್, ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್, ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಟ್ರಸ್ಟಿ ಹಾಗೂ ನೇತ್ರತಜ್ಞರಾದ ಡಾ.ಲಾವಣ್ಯ, ಶ್ರೀದೇವಿ ಆಸ್ಪತ್ರೆಯ ಮನೋವೈದ್ಯ ಡಾ.ಭಾವನಾಪ್ರಸಾದ್, ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಡಾ.ನರೇಂದ್ರವಿಶ್ವನಾಥ್, ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಎಂ.ಎಲ್.ಹರೇಂದ್ರ ಕುಮಾರ್, ಶ್ರೀದೇವಿ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ.ಕೆ. ಮೋಹನ್‌ಕುಮಾರ್, ಶ್ರೀದೇವಿ ಆಸ್ಪತ್ರೆಯ ಸಿ.ಎ.ಓ. ಡಾ.ಪ್ರದೀಪ್‌ಕುಮಾರ್ ವೆಗ್ಗಿ, ಮರ್ಲಿನ್, ವಿವಿಧ ಕಾಲೇಜಿನ ಪ್ರಾಂಶುಪಾಲರು, ಉಪಪ್ರಾಂಶುಪಾಲರು, ವಿದ್ಯಾರ್ಥಿ–ವಿದ್ಯಾರ್ಥಿನಿಯರು, ವೈದ್ಯಕೀಯ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

HPV ಲಸಿಕಾ ಅಭಿಯಾನಕ್ಕೆ ಅಶ್ವಿಜ ಚಾಲನೆ;ಜಿಲ್ಲಾಸ್ಪತ್ರೆಗೆ ಸಿಇಓ ಭೇಟಿ ಪರಿಶೀಲನೆ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಜಿಲ್ಲಾಸ್ಪತ್ರೆಯಲ್ಲಿಂದು ಹಮ್ಮಿಕೊಂಡಿದ್ದ ಹೆಚ್.ಪಿ.ವಿ.(Human Papilloma Virus) ಲಸಿಕಾ ಅಭಿಯಾನಕ್ಕೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಶ್ವಿಜ ಬಿ.ವಿ ಚಾಲನೆ ನೀಡಿದರು. ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, 14 ವರ್ಷ ವಯಸ್ಸಿನ ಪ್ರತಿಯೊಬ್ಬ ಹೆಣ್ಣು ಮಗು ಈ ಲಸಿಕೆಯನ್ನು ಕಡ್ಡಾಯವಾಗಿ ಹಾಕಿಸಿಕೊಳ್ಳಬೇಕು. ಈ ಲಸಿಕೆಯಿಂದ ಗರ್ಭ ಕಂಠದ ಕ್ಯಾನ್ಸರ್ ಅನ್ನು ತಡೆಗಟ್ಟಬಹುದು ಎಂದರು.

ಜಿಲ್ಲೆಯಲ್ಲಿ 24950 ಮಕ್ಕಳಿಗೆ ಲಸಿಕೆ ಹಾಕುವ ಗುರಿ ಹೊಂದಲಾಗಿದ್ದು, ಇದುವರೆಗೆ 9770 ಮಕ್ಕಳಿಗೆ ಲಸಿಕೆ ಹಾಕಲಾಗಿದೆ. ಶೀಘ್ರದಲ್ಲಿಯೇ ಗುರಿಯನ್ನು ತಲುಪಬೇಕು ಎಂದು ವೈದ್ಯಾಧಿಕಾರಿಗಳಿಗೆ ಅವರು ಸೂಚನೆ ನೀಡಿದರು.

ಇದೇ ವೇಳೆ ಮಕ್ಕಳಿಗೆ ಲಸಿಕೆ ಹಾಕಿ ಪ್ರಮಾಣ ಪತ್ರಗಳನ್ನು ನೀಡಲಾಯಿತು.

ಜಿಲ್ಲಾ ಆಸ್ಪತ್ರೆಗೆ ಭೇಟಿ : ನಂತರ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿದ ಅವರು, ಹೆರಿಗೆ ವಿಭಾಗ, ಮಕ್ಕಳ ಆರೈಕೆ ವಿಭಾಗ, ಶಸ್ತ್ರಚಿಕಿತ್ಸೆ ವಿಭಾಗ, ಹೊರ ರೋಗಿಗಳ ವಿಭಾಗಗಳಿಗೆ ಭೇಟಿ ನೀಡಿ ರೋಗಿಗಳು ಹಾಗೂ ವೈದ್ಯರ ಜೊತೆ ಚರ್ಚಿಸಿ ಮಾತನಾಡಿದರು. ಆಸ್ಪತ್ರೆಯ ಸ್ವಚ್ಛತೆ ಬಗ್ಗೆ ಹೆಚ್ಚು ಗಮನ ಕೊಡಬೇಕು. ಆಸ್ಪತ್ರೆಗೆ ಬರುವ ರೋಗಿಗಳಿಗೆ ಸರಿಯಾದ ಸೇವೆ ನೀಡಿ ಉತ್ತಮ ಔಷಧೋಪಚಾರ ಮಾಡಬೇಕು ಸೂಚಿಸಿದರು. ಬಳಿಕ ಜಿಲ್ಲಾಸ್ಪತ್ರೆ ಆವರಣದಲ್ಲಿ ಕೈಗೊಂಡಿರುವ ದುರಸ್ತಿ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಈ ವೇಳೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ॥ ಚಂದ್ರಶೇಖರ್ ಸೇರಿದಂತೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು, ಆರೋಗ್ಯಾಧಿಕಾರಿಗಳು ಉಪಸ್ಥಿತರಿದ್ದರು.

ಡಾ. ಬಾಬು ಜಗಜೀವನ ರಾಂ 40ನೇ ಪುಣ್ಯಸ್ಮರಣೆ ಸರಳವಾಗಿ ಆಚರಣೆ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಹಸಿರು ಕ್ರಾಂತಿಯ ಹರಿಕಾರ, ರಾಷ್ಟ್ರನಾಯಕ ಹಾಗೂ ಭಾರತದ ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನ ರಾಂ ಅವರ 40ನೇ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸರಳವಾಗಿ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಡಾ. ಬಾಬು ಜಗಜೀವನ ರಾಂ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಅವರ ಸೇವೆಗಳನ್ನು ಸ್ಮರಿಸಲಾಯಿತು. ಜಿಲ್ಲಾಧಿಕಾರಿ ಶುಭಕಲ್ಯಾಣ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಶ್ವಿಜ ಬಿ.ವಿ., ಅಪರ ಜಿಲ್ಲಾಧಿಕಾರಿ ಡಾ: ಎನ್. ತಿಪ್ಪೇಸ್ವಾಮಿ ಸೇರಿದಂತೆ ಸಮಾಜದ ಮುಖಂಡರು, ಅಧಿಕಾರಿಗಳು ಪುಷ್ಪಾರ್ಚನೆಯಲ್ಲಿ ಭಾಗಿಯಾಗಿದ್ದರು.

ಈ ಸಂದರ್ಭದಲ್ಲಿ ಹಲವಾರು ಸಮಾಜದ ಮುಖಂಡರು ಮಾತನಾಡಿ, ಡಾ. ಬಾಬು ಜಗಜೀವನ ರಾಮ್ ಅವರು ದೇಶದ ಉಪ ಪ್ರಧಾನಿಯಾಗಿ ಮಹತ್ತರ ಕೊಡುಗೆ ನೀಡಿದ ಮಹಾನ್ ನಾಯಕರು. ಸಂವಿಧಾನದ ಹಕ್ಕುಗಳಿಗಾಗಿ ಹೋರಾಡಿದವರು. ಸಮಾಜದಲ್ಲಿ ಸಮಾನತೆ, ಶಾಂತಿ ಮತ್ತು ಸಹಿಷ್ಣುತೆ ಮೌಲ್ಯಗಳನ್ನು ಪ್ರತಿಪಾದಿಸಿದ ಅವರು, ಯುವಜನತೆಗೆ ಆದರ್ಶವಾಗಿದ್ದಾರೆ ಎಂದು ಬಾಬೂಜಿ ಅವರನ್ನು ಕೊಂಡಾಡಿದರಲ್ಲದೆ, ಅವರ ವಿಚಾರಧಾರೆಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಕಾರ್ಯವೂ ನಡೆಯಬೇಕು. ಬಾಬು ಜಗಜೀವನ ರಾಮ್ ಭವನ ನಿರ್ಮಾಣ ಮತ್ತು ಅವರ ಪ್ರತಿಮೆ ಸ್ಥಾಪನೆಗೆ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ವಿವಿಧ ಇಲಾಖೆ ಅಧಿಕಾರಿಗಳು, ಜನಪ್ರತಿನಿಧಿಗಳು ಹಾಗೂ ವಿವಿಧ ಸಂಘಟನೆಗಳ ಮುಖಂಡರು ಉಪಸ್ಥಿತರಿದ್ದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ವಕೀಲನ ಮೇಲೆ ಹಲ್ಲೆ

ದೂರು ದಾಖಲು,ವಕೀಲರ ಖಂಡನೆ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ವಕೀಲನ ಮೇಲೆ ಹಲ್ಲೆ ನಗರ ಪೋಲೀಸ್ ಠಾಣೆಯಲ್ಲಿ ದೂರು ದಾಖಲು,ವಕೀಲರ ಖಂಡನೆ

ತುಮಕೂರು: ತುಮಕೂರು ಜಿಲ್ಲಾ ನ್ಯಾಯಾಲಯದ ಸಂಕೀರ್ಣದಲ್ಲಿರುವ 2ನೇ ಅಧಿಕ ಹಿರಿಯ ಸಿವಿಲ್ ನ್ಯಾಯಾಲಯದಿಂದ ನ್ಯಾಯಾಲಯದ ಕಲಾಪ ಮುಗಿಸಿಕೊಂಡು ಹೊರಬರುತ್ತಿದ್ದ ವಕೀಲರಾದ ಎಂ.ಸಿ.ರವೀಶ್(52ವರ್ಷ) ಎಂಬುವವರ ಮೇಲೆ ಕೇಸಿನ 2ನೇ ಎದುರುದಾರನಾದ ಬಿ.ಎ.ನಿರಂಜನ್ ಬಿನ್ ಅಡವೀಶಯ್ಯ ಎನ್ನುವವರು ಏಕಾಏಕಿ ವಕೀಲರ ಮೇಲೆ ಕಲ್ಲಿನಿಂದ ಎರಗಿ ಎಡ ಮುಖ,ತುಟಿಗೆ,ಕೆನ್ನೆ ಮೇಲೆ ಬಾರಿಸಿ ಅಶ್ಲೀಲವಾಗಿ ಬೈದು,ಸಾರ್ವಜನಿಕವಾಗಿ ಹಲ್ಲೆ ಮಾಡಿ,ಜೀವ ಬೆದರಿಕೆ ಹಾಕಿದ್ದು ವಕೀಲರು ನನಗೆ ಪ್ರಾಣಭೀತಿ ಇದೆ,ನನ್ನನ್ನು ಕೊಲೆ ಮಾಡಲು ಪ್ಲಾನ್ ಮಾಡಿದ್ದಾನೆ ನನಗೆ ಪೋಲೀಸ್ ರಕ್ಷಣೆ ನೀಡಿ ಎಂದು ವಕೀಲರೊಂದಿಗೆ ನಗರ ಪೋಲೀಸ್ ಠಾಣೆಗೆ ತೆರಳಿ ದೂರು ದಾಖಲಿಸಿದ್ದಾರೆ.ಪ್ರಕರಣದ ಆರೋಪಿ ಓಡಿ ಹೋಗಿದ್ದಾನೆ ಎಂದು ತಿಳಿದುಬಂದಿದೆ.ಜಿಲ್ಲಾ ವಕೀಲರ ಸಂಘದ ಸದಸ್ಯರು ಸದರಿ ಕೃತ್ಯವನ್ನು ಖಂಡಿಸಿ ಅಪರಾಧಿಯನ್ನು ಬಂಧಿಸಿ ಆತನ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.

ಜನ ನಿಬಿಡ ಪ್ರದೇಶದಲ್ಲೇ ಕಳ್ಳತನಕ್ಕೆ ಯತ್ನ

ಸೂರ್ಯಪ್ರಗತಿನ್ಯೂಸ್.ಕಾಂ



ಹುಳಿಯಾರು : ಪಟ್ಟಣದ ಜನನಿಬಿಡ ಪ್ರದೇಶದಲ್ಲಿರುವ ಮನೆಯಲ್ಲಿ ಹಗಲು ಹೊತ್ತಿನಲ್ಲೇ ಕಳ್ಳತನಕ್ಕೆ ಯತ್ನ ನಡೆದಿರುವ ಘಟನೆ ಭಾನುವಾರ ಮಧ್ಯಾಹ್ನ ನಡೆದಿದೆ.

ಪಟ್ಟಣದ ವಾಸವಿ ಶಾಲೆ ಸಮೀಪದ ಜೀವನ್ ಫಾರ್ಮ್ ಮನೆ ಪಕ್ಕದಲ್ಲಿರುವ ಎಪಿಎಂಸಿ ಸಿದ್ದು ಅವರ ಮನೆಯನ್ನು ಕಳ್ಳರು ಗುರಿಯಾಗಿಸಿಕೊಂಡಿದ್ದಾರೆ. ಮಧ್ಯಾಹ್ನ ಸುಮಾರು 2.30 ಗಂಟೆ ವೇಳೆಗೆ ಸಿದ್ದು ದಂಪತಿಗಳು ಮನೆಯಲ್ಲಿ ಇಲ್ಲದ ವೇಳೆ ಮನೆಯ ಬಾಗಿಲಿನ ಚಿಲಕ ಹಾಗೂ ಬೀಗವನ್ನು ಮುರಿದು ಒಳನುಗ್ಗಿದ ಕಳ್ಳರು, ಬೀರುವನ್ನೂ ಒಡೆದು ವಸ್ತುಗಳನ್ನು ಶೋಧಿಸಿದ್ದಾರೆ.

ಆದರೆ ಮನೆಯಲ್ಲಿ ಇದ್ದ ಚಿನ್ನಾಭರಣ ಹಾಗೂ ಇತರೆ ಬೆಲೆ ಬಾಳುವ ವಸ್ತುಗಳನ್ನು ಬ್ಯಾಂಕಿನ ಲಾಕರ್ ನಲ್ಲಿ ಸುರಕ್ಷಿತವಾಗಿ ಇಡಲಾಗಿದ್ದರಿಂದ ಕಳ್ಳರಿಗೆ ಯಾವುದೇ ಬೆಲೆ ಬಾಳುವ ವಸ್ತು ಸಿಕ್ಕಿಲ್ಲ.

ಘಟನೆ ನಡೆದ ಮನೆ ಸುತ್ತಮುತ್ತ ಮನೆಗಳಿದ್ದು, ಆ ಸಮಯದಲ್ಲಿ ನಿವಾಸಿಗಳೂ ಮನೆಯಲ್ಲೇ ಇದ್ದರು. ಅಲ್ಲದೆ ಸದಾ ಜನ ಸಂಚಾರವಿರುವ ರಸ್ತೆಯಲ್ಲೇ ದುಷ್ಕರ್ಮಿಗಳು ಕಳ್ಳತನಕ್ಕೆ ಯತ್ನಿಸಿರುವುದು ಸ್ಥಳೀಯರಲ್ಲಿ ಆತಂಕ ಮೂಡಿಸಿದೆ.

ಸುದ್ದಿ ತಿಳಿಯುತ್ತಿದ್ದಂತೆಯೇ ಹುಳಿಯಾರು ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ದಾಕ್ಷಾಯಣಮ್ಮ ಹಾಗೂ ಎ ಎಸ್ ಐ ವೆಂಕಟೇಶ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಪ್ರಕರಣದ ಕುರಿತು ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಸೇವೆಯನ್ನು ಮಾಡುವಾಗ ಎಷ್ಟು ಕೊಟ್ಟೆ ಎಂಬುದು ಮುಖ್ಯವಲ್ಲ ಯಾರಿಗೆ ಕೊಟ್ಟೆ ಎಂಬುದು ಮುಖ್ಯ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರಿನ ಎಸ್‌ಎಸ್‌ಐಟಿಯ ಎಂಬಿಎ ಆಡಿಟೋರಿಯಂನಲ್ಲಿ ಜು.5ರಂದು ರೋಟರಿ ತುಮಕೂರು ಪ್ರೇರಣಾ ಸಂಸ್ಥೆಯ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದ ರೊ. ರಘು ಎಸ್. ರವರ ಮತ್ತು ಕಾರ್ಯದರ್ಶಿ ರೊ. ಶ್ರೀನಿವಾಸ ಮೂರ್ತಿ ಜಿ. ರವರ ಹೊಸ ತಂಡ ಪದವಿ ಸ್ವೀಕಾರ ಸಮಾರಂಭ ನಡೆಯಿತು.

ಈ ಕಾರ್ಯಕ್ರಮದಲ್ಲಿ ನೂತನ ಅಧ್ಯಕ್ಷರು, ಕಾರ್ಯದರ್ಶಿ ಹಾಗು ನೂತನ ಸದಸ್ಯರುಗಳಿಗೆ ಮಾಜಿ ಜಿಲ್ಲಾ ಪಾಲಕರಾದ ರೊ. ಕೆ.ಎಸ್. ನಾಗೇಂದ್ರ ರವರು ಎಲ್ಲರಿಗೂ ರೋಟರಿ ಪಿನ್ ಹಾಕಿ ರೋಟರಿಯ ಧ್ಯೇಯೋದ್ದೇಶಗಳ ಪ್ರತಿಜ್ಞಾ ವಿಧಿ ಭೋದಿಸಿದರು, ಇವರು ಮಾತನಾಡುತ್ತಾ ಸೇವೆಯನ್ನು ಮಾಡುವಾಗ ಎಷ್ಟು ಕೊಟ್ಟೆ ಎಂಬುದು ಮುಖ್ಯವಲ್ಲ ಯಾರಿಗೆ ಕೊಟ್ಟೆ, ಯಾವ ಸಂದರ್ಭದಲ್ಲಿ ನೀಡಿದೆ ಎಂಬುದು ಮುಖ್ಯ ಸೇವೆಯ ಸಾರ್ಥಕತೆ ದೊರಕುವುದು ಆಗ ಮಾತ್ರ, ನಾನು ಜಿಲ್ಲಾ ಪಾಲಕನಾದ ಸಂಧರ್ಭದಲ್ಲಿ ಒಂದು ಡಯಾಲಿಸಿಸ್ ಸೆಂಟರ್ ಸ್ಥಾಪನೆ ಮಾಡಿದ್ದು ಅದರ ಲಾಭವನ್ನು ಒಂದು ಲಕ್ಷ ಮುವತ್ತೂ ಸಾವಿರ ಜನ ಪಡೆದಿದ್ದರು ಅವರೆಲ್ಲರು ರೋಟರಿ ಸಂಸ್ಥೆಯನ್ನು ನೆನಪಿಸಿಕೊಳ್ಳುತ್ತಿದ್ದಾರೆ ಅದು ಸಂತೋಷ ತಂದಿತ್ತು ಎಂದರು.

ರೋಟರಿ ಸಂಸ್ಥೆ ಒಂದು ಅಂತರಾಷ್ಟ್ರೀಯ ಸಂಸ್ಥೆಯಾಗಿದ್ದು, ಶಿಕ್ಷಣ, ಸಾಕ್ಷರತೆ, ಹೆಣ್ಣುಮಕ್ಕಳ ಸ್ವಾವಲಂಭನೆ, ಪರಿಸರ, ವೈದ್ಯಕೀಯ ಉದ್ಯೋಗಾದಾರಿತ ತರಬೇತಿಗಳಿಗೆ ಹೆಚ್ಚು ಹೆಚ್ಚು ಗಮನ ನೀಡಿ ಪ್ರಪಂಚದಾದ್ಯಂತ ಸೇವಾ ಕಾರ್ಯಕ್ರಮಗಳನ್ನು ನೀಡುತ್ತಾ ಬಂದಿದೆ, ರೋಟರಿ ಸಂಸ್ಥೆ ಪ್ರಪಂಚದ ಅತಿದೊಡ್ಡ ಸೇವಾಕಾರ್ಯಗಳನ್ನು ಮಾಡುವ ಸರ್ಕಾರೇತರ ಸಂಸ್ಥೇಯಾಗಿರುವುದು ನಮ್ಮ ಹೆಮ್ಮೆ ಎಂದರು, ನಾವುಗಳು ಅದರ ಭಾಗವಾಗಿರುವುದು ನಮ್ಮ ಅದೃಷ್ಟ ಎಂದರು, ಯುವಜನರು ಸೇವೆಯ ಕಡೆ ಹೆಚ್ಚು ಆಸಕ್ತಿ ತೋರಬೇಕು ಎಂದರು ರೋಟರಿ ತುಮಕೂರು ಪ್ರೇರಣಾ ಕ್ಲಬ್ ನಲ್ಲಿ ಹೆಚ್ಚು ಯುವಕರು ಪಾಲ್ಗೊಂಡಿರುವುದು ಖುಷಿ ತಂದಿದೆ ಎಂದರು ನುಡಿದರು,

ಈ ಪದಗ್ರಹಣ ಸಮಾರಂಭದಲ್ಲಿ ರೊ. ರಘು ಎಸ್, ರವರು ಅಧ್ಯಕ್ಷ ಪದವಿ ಸ್ವೀಕಾರವನ್ನು ಪಡೆದು 2026– 27ನೇ ಸಾಲಿಗೆ ನನ್ನನ್ನು ರೋಟರಿ ಪ್ರೇರಣಾ ಎಲ್ಲಾ ಸದಸ್ಯರುಗಳಿಗೆ ಧನ್ಯವಾದಗಳನ್ನು ತಿಳಿಸುತ್ತಾ, ನಾನು ನನ್ನ ಅವಧಿಯಲ್ಲಿ ಸರ್ಕಾರಿ ಶಾಲೆಗಳ ಅಭಿವೃದ್ಧಿ, ಪರಿಸರದ ಬಗ್ಗೆ ಹೆಚ್ಚು ಹೊತ್ತು ನೀಡಿ ಸೇವಾ ಕಾರ್ಯಗಳನ್ನು ಕೈಗೊಳ್ಳುತ್ತೇನೆ. ಪ್ರತಿಯೊಬ್ಬ ಸದಸ್ಯರ ಅಭಿಪ್ರಾಯಕ್ಕೆ ಗೌರವನ್ನು ಕೊಡುತ್ತಾ ಎಲ್ಲರನ್ನು ವಿಸ್ವಾಸಕ್ಕೆ ತೆಗೆದುಕೊಂಡು ಎಲ್ಲರನ್ನು ಜೊತೆಗೂಡಿಸಿಕೊಂಡು ಪ್ರತಿಯೊಬ್ಬ ಸದಸ್ಯರಿಗೂ ಸೇವೆ ಮಾಡುವ ಅವಕಾಶವನ್ನು ನೀಡುತ್ತೇನೆ. ನಿಮ್ಮೆಲ್ಲರ ಸೇವಕನಾಗಿ ಕೆಲಸ ಮಾಡುತ್ತೇನೆ, ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ನನ್ನ ಕೈಲಾದಷ್ಟು ಸಹಾಯ ಮಾಡುತ್ತೇನೆ ಎಂದರು. ನನ್ನನ್ನು ರೋಟರಿಗೆ ಪರಿಚಯಿಸಿದ ರೊ. ಮಲ್ಲಿಕಾರ್ಜುನ ಮೇಳೇಹಳ್ಳಿ, ಮತ್ತು ರೊ. ರಾಜಶೇಖರ್ ರವರಿಗೆ ಧನ್ಯವಾದ ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ತುಮಕೂರಿನ ಉದ್ಯಮಿ, ರೋಟರಿಯ ಮಾಜಿ ಜಿಲ್ಲಾ ಪಾಲಕರಾದ ರೊ. ಆಶಾ ಪ್ರಸನ್ನ ಕುಮಾರ್ ರವರಿಗೆ ರೋಟರಿ ತುಮಕೂರು ಪ್ರೇರಣಾದ ವತಿಯಿಂದ "ಅತ್ಯುನ್ನತ ಸೇವಾ ನಾಗರೀಕ ಪ್ರಶಸ್ತಿ" ಪ್ರಶಸ್ತಿ ನೀಡಿ ಗೌರವಿಸಲಾಯಿತು, ಪ್ರಶಸ್ತಿ ಸ್ವೀಕರಿಸಿ ಇಂದು ಪ್ರೇರಾಣಾ ತಂಡ ನನ್ನನ್ನು ಕರೆಯಿಸಿ ಬಹುದೊಡ್ಡ ಪ್ರಶ್ತಿಯನ್ನು ನೀಡಿ ಇನ್ನು ನನ್ನ ಜವಾಬ್ದಾರಿಯನ್ನು ಹೆಚ್ಚಿಸಿದೆ ಸೇವೆ ಯಾವುದೇ ಪ್ರತಿಪಲಾಕ್ಷೇ ಇಲ್ಲದೆ ಮಾಡಬೇಕು ತನ್ನ ಯಾವುದೇ ಬೇಕುಗಳಿಗೆ ಸೇವೆ ಇರಬಾರದು ಅದು ಬೇರೆಯವರಿಗೂ ಮಾದರಿಯಾಗಿರಬೇಕು ಎಂದು ತಿಳಿಸಿದರು. ಮತ್ತು ರೋಟರಿ ತುಮಕೂರು ಪ್ರೇರಣಾ ಒಂದು ಯುವ ತಂಡವಾಗಿ ಜಿಲ್ಲೆಯಲ್ಲಿ ಒಳ್ಳೆಯ ಕಾರ್ಯಗಳನ್ನು ಮಾಡುತ್ತಾ ವಿಶಿಷ್ಟ ಹೆಸರನ್ನು ಪಡೆದುಕೊಂಡಿದೆ ಅದನ್ನು ಹಾಗೇಯೇ ಉಳಿಸಿಕೊಂಡು ಹೋಗಬೇಕು ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಸಭೆಯನ್ನು ಉದ್ದೇಶಿಸಿ ವ್ಯಕ್ತಿತ್ವ ವಿಕಸನ ತರಬೇತಿದಾರರಾದ ಶ್ರೀ ಯೋಗಿ ಅನೀಶ್ ಮಾತನಾಡುತ್ತಾ ನಾವೆಲ್ಲರು ಜೀವನದಲ್ಲಿ ಕುಳಿತುಕೊಳ್ಳುವುದನ್ನು ಕಲಿತಿದ್ದೇವೆ, ಆದರೆ ಸಾಧಿಸುವ ಕಾರ್ಯಗಳಿಗೆ ಎದ್ದು ನಿಲ್ಲುವುದನ್ನು ಕಲಿಯಬೇಕು, ಸಾಕಷ್ಟು ಹೃದಯ ಮುಟ್ಟುವಂತ ಸೇವಾ ಕಾರ್ಯಗಳನ್ನು ಮಾಡುವುದು ಒಳಿತು. ರೋಟರಿ ಅನೇಕ ಜನರನ್ನು ಗುರುತಿಸಿದೆ ಅದರಲ್ಲಿ ನಾನು ಒಬ್ಬ, ನಾನು ಕೂಡ ರೋಟರಿ ಮಾಜಿ ಸದಸ್ಯ, ಹೊಸ ಅಧ್ಯಕ್ಷರಾಗಿ ಆಯ್ಕೆಯಾಗಿರುವ ರಘು ರವರನ್ನು ಅಭಿನಂದಿಸಿದರು.

ಸಮಾರಂಭದಲ್ಲಿ ಶಿರಾ ತಾಲ್ಲೂಕಿನ ಮುದಿಮಡು ಸರ್ಕಾರಿ ಶಾಲೆಗೆ 3000 ಲೀಟರ್ ಸಾಮರ್ಥ್ಯದ ನೀರಿನ ಟ್ಯಾಂಕ್ ವಿತರಿಸಲಾಯಿತು, ಹಾಗೆ ಸಿದ್ದಾರ್ಥ ಪತ್ರಿಕೋಧ್ಯಮ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ ನೀಡಲಾಯಿತು, ಪ್ರೆಸ್ ಕ್ಲಬ್ ಗೆ 20 ಲೀಟರ್ ಸಾಮರ್ಥ್ಯದ ವಾಟರ್ ಫಿಲ್ಟರ್ ನೀಡಲಾಯಿತು.

ಕಾರ್ಯಕ್ರಮದಲ್ಲಿ 9 ಜನ ರೋಟರಿ ತುಮಕೂರು ಪ್ರೇರಣಾಕ್ಕೆ ಹೊಸ ಸದಸ್ಯರಾಗಿ ಸೇರ್ಪಡೆಯಾಗಿದ್ದಾರೆ. ಒಟ್ಟು 36 ಜನ ನಿರ್ದೇಶಕರಾಗಿ ಪದವಿ ಸ್ವಿಕಾರ ಪಡೆದರು,

ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಯದರ್ಶಿ ಪ್ರಸನ್ನಕುಮಾರ್, ವಲಯ ಪಾಲಕಾರಾದ ರೊ. ಪ್ರಮೀಳ ಶಿವಕುಮಾರ್, ಸಹಾಯಕ ಪಾಲಕರಾದ ರೊ. ಸರೋಜಮ್ಮ, ಪ್ರೇರಣಾ ಸಂಸ್ಥಾಪಕ ಅದ್ಯಕ್ಷ ರೊ. ರಾಜಶೇಖರ್, ರೊ. ಶಿವಕುಮಾರ್ ಕೆ.ಜಿ., ಮಾಜಿ ವಲಯಪಾಲಕರಾದ ರೊ. ಪ್ರಕಾಶ್ ಎಂ.ಎಸ್., ಪ್ರೇರಣಾ ಛಾರಿಟೇಬಲ್ ಅಧ್ಯಕ್ಷ ರೊ. ಮಲ್ಲಿಕಾರ್ಜುನ ಮೇಳೇಹಳ್ಳಿ, ರೊ. ಜನಾರ್ದನ್, ರೋಟರಿ ಪ್ರೇರಣಾ ಎಲ್ಲಾ ಸದಸ್ಯರುಗಳು ಭಾಗಿಯಾಗಿದ್ದರು. ಸಮಾರಂಭದಲ್ಲಿ ರೊ. ಉಮಾಮಹೇಶ್ ಎಲ್ಲರನ್ನು ಸ್ವಾಗತಿಸಿದರು, ರೊ. ಧನಲಕ್ಷ್ಮಿ ರವರು ನಿರೂಪಿಸಿದರು, ಕಾರ್ಯದರ್ಶಿ ರೊ. ಶ್ರಿನಿವಾಸಮೂರ್ತಿ ಜಿ. ಎಲ್ಲರನ್ನು ವಂದಿಸಿದರು.

ಅರಿವು ವಿದ್ಯಾಭ್ಯಾಸ ಸಾಲ ಸೌಲಭ್ಯಕ್ಕಾಗಿ ಆನ್‌ಲೈನ್ ಅರ್ಜಿ ಆಹ್ವಾನ

ತುಮಕೂರು: ಕರ್ನಾಟಕ ಕ್ರಿಶ್ಚಿಯನ್ ಸಮುದಾಯ ಅಭಿವೃದ್ಧಿ ನಿಗಮದ ವತಿಯಿಂದ ಅರಿವು ವಿದ್ಯಾಭ್ಯಾಸ ಸಾಲಕ್ಕಾಗಿ ಅರ್ಹ ಕ್ರಿಶ್ಚಿಯನ್ ಸಮುದಾಯದ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಸಿ.ಇ.ಟಿ. ಅಥವಾ ನೀಟ್ ಅಥವಾ ಜೆ.ಇ.ಇ. ಮೂಲಕ ಆಯ್ಕೆಯಾದ ಎಂ.ಬಿ.ಬಿ.ಎಸ್, ಎಂ.ಡಿ./ಎಂ.ಎಸ್. ಕೋರ್ಸ್‌ಗಳಿಗೆ ಸರ್ಕಾರಿ ಕಾಲೇಜು /ಖಾಸಗಿ ಮ್ಯಾನೇಜ್‌ಮೆಂಟ್ ಕೋಟಾದಡಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಗರಿಷ್ಠ 5ಲಕ್ಷ ರೂ.ಗಳವರೆಗೆ ಸಾಲ ನೀಡಲಾಗುವುದು.

ವೃತ್ತಿಪರ ಕೋರ್ಸ್‌ಗಳಾದ ಎಂ.ಬಿ.ಬಿ.ಎಸ್, ಎಂ.ಡಿ., ಬಿ.ಡಿ.ಎಸ್, ಎಂ.ಡಿ.ಎಸ್, ಬಿ.ಆಯುಷ್, ಎಂ.ಆಯುಷ್, ಬಿ.ಇ., ಬಿ.ಟೆಕ್, ಎಂ.ಟೆಕ್, ಎಂಇ, ಬಿ.ಆರ್ಕಿಟೆಕ್ಚರ್, ಎಂ. ಆರ್ಕಿಟೆಕ್ಚರ್, ಎಂ.ಬಿ.ಎ., ಎಂ.ಸಿ.ಎ., ಎಲ್.ಎಲ್.ಬಿ., ಬಿಎಸ್ಸಿ ಇನ್ ಹಾರ್ಟಿಕಲ್ಚರ್/ಅಗ್ರಿಕಲ್ಚರ್, ಅಗ್ರಿಕಲ್ಚರ್ ಇಂಜಿನಿಯರಿಂಗ್, ಡೈರಿ ಟೆಕ್ನಾಲಜಿ, ಫಾರೆಸ್ಟರಿ, ವೆಟರ್ನರಿ ಮತ್ತು ಅನಿಮಲ್ ಸೈನ್ಸ್, ಫುಡ್ ಟೆಕ್ನಾಲಜಿ, ಬಯೋಟೆಕ್ನಾಲಜಿ, ಫಿಷರೀಸ್, ಸಿರಿಕಲ್ಚರ್, ಹೋಂ/ ಕಮ್ಯೂನಿಟಿ ಸೈನ್ಸ್, ಫುಡ್ ನ್ಯೂಟ್ರಿಷಿಯನ್ ಅಂಡ್ ಡೈಯಟೆಟಿಕ್ಸ್, ಬಿ.ಫಾರ್ಮ, ಎಂ.ಫಾರ್ಮ, ಫಾರ್ಮ ಡಿ. ಮತ್ತು ಡಿ.ಫಾರ್ಮ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಆನ್‌ಲೈನ್ ಹಣಣಿ:// ಇಛಿಛಿಜಛಿಣಿತಿಟಟಿಣಟಿಜಿ.ಇಚಿಡಿಟಿಚಿಣಚಿಞಚಿ.ರಿತಿ.ಟಿ ಮುಖಾಂತರ ಸೆಪ್ಟೆಂಬರ್ 30ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವ್ಯವಸ್ಥಾಪಕರ ಕಚೇರಿ, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಮೌಲನಾ ಅಜಾದ್ ಭವನ, ಇಂದಿರಾ ಕಾಲೇಜು ಮುಂಭಾಗ, ಉಪ್ಪಾರಹಳ್ಳಿ, ತುಮಕೂರು ಅಥವಾ ದೂ.ವಾ.ಸಂ. 0816–2281023 ಅಥವಾ ಸಹಾಯವಾಣಿ ಸಂಖ್ಯೆ 6360753075ನ್ನು ಸಂಪರ್ಕಿಸಬೇಕೆಂದು ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಯುವ ವಕೀಲರು ವೃತ್ತಿಬದ್ಧತೆಯೊಂದಿಗೆ ಸಮಾಜ ಪರಿವರ್ತನೆಗೂ ಸಹಕರಿಸಿ; ಕುಲಪತಿ ಪ್ರೊ. ಬಸವರಾಜು

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಕಾನೂನು ಪದವಿ ಪಡೆದು ವೃತ್ತಿ ಬದುಕುಆರಂಭಿಸುವ ನವ ವಕೀಲರಿಗೆ ವೃತ್ತಿಗೌರವದಜೊತೆಗೆ ಸಾಮಾಜಿಕ ಜವಾಬ್ದಾರಿಯೂಇರುತ್ತದೆ. ವೃತ್ತಿಯಲ್ಲಿ ಬದ್ಧತೆ, ನಿಷ್ಠೆ, ಜ್ಞಾನ ವೃದ್ಧಿಯಜೊತೆಗೆ ಅರ್ಪಣಾ ಮನೋಭಾವ ಬೆಳೆಸಿಕೊಂಡು ಸಾಮಾಜಿಕ ಪರಿಸರದಲ್ಲಿ ವೃತ್ತಿಗೌರವ ಹೆಚ್ಚಿಸಿಕೊಳ್ಳಬಹುದು.ತಮ್ಮ ವೈಯಕ್ತಿಕ ಬದುಕಿನಜೊತೆಗೆ ವೃತ್ತಿಯ ಶೇಕಡ 50ರಷ್ಟನ್ನುಸಮಾಜದ ಸೇವೆಗಾಗಿ ಮುಡುಪಾಗಿಡಬೇಕುಎಂದು ಹುಬ್ಬಳ್ಳಿಯ ರಾಜ್ಯಕಾನೂನು ವಿಶ್ವವಿದ್ಯಾಲಯ ಕುಲಪತಿ ಪ್ರೊ.ಸಿ.ಬಸವರಾಜು ಹೇಳಿದರು.

ಸೋಮವಾರ ನಗರದ ವಿದ್ಯೋದಯ ಕಾನೂನು ಕಾಲೇಜಿನಘಟಿಕೋತ್ಸವ ಸಮಾರಂಭ ಉದ್ಘಾಟಿಸಿ ಕಾಲೇಜಿನ ಕಾನೂನು ಪದವಿಧರರಿಗೆ ಪದವಿ ಪ್ರಮಾಣಪತ್ರ ಪ್ರದಾನ ಮಾಡಿ ಮಾತನಾಡಿದ ಕುಲಪತಿಗಳು, ಕಾನೂನು ಪದವಿ ಪಡೆದ ಮೇಲೆ ನೂರು ವಕೀಲರ ನಡುವೆತಾವು ಶ್ರೇಷ್ಠ ವಕೀಲರಾಗಿ ಬೆಳೆಯುವ ಪ್ರಯತ್ನ ಮಾಡಬೇಕು.ಅದಕ್ಕಾಗಿ ಪೂರಕಜ್ಞಾನ, ಬದ್ಧತೆಯನ್ನು ಅಳವಡಿಸಿಕೊಳ್ಳಬೇಕು.ವಕೀಲರುಯಾವತ್ತೂ ಸಮಾಜಮುಖಿಗಳಾಗಬೇಕು.ಅಸಹಾಯಕರಿಗೆ ಕಾನೂನು ಮಾರ್ಗದರ್ಶನ ನೀಡುವ ಮೂಲಕ ಅವರಿಗೆ ನ್ಯಾಯ ಒದಗಿಸಿ ಸಮಾಜ ಪರಿವರ್ತನೆಗೂ ಸಹಕರಿಸಬೇಕುಎಂದು ಸಲಹೆ ಮಾಡಿದರು.

ದೇಶಕ್ಕೆ ಸ್ವಾತಂತ್ರ್ಯ ಬಂದು 76 ವರ್ಷಗಳಾದರೂ ಅನೇಕ ಸಮಸ್ಯೆಗಳು ನಿವಾರಣೆ ಆಗದೆ ಉಳಿದಿವೆ . ಶೇಕಡ 85ರಷ್ಟು ಜನರಿಗೆ ಈ ನೆಲದ ಕಾನೂನಿನ ಅರಿವಿಲ್ಲ. ಬಡತನ, ಕಾನೂನಿನ ಅಜ್ಞಾನ, ಅನಕ್ಷರತೆ ಮುಂತಾದ ಕಾರಣಗಳಿಂದನ್ಯಾಯಾಲಯದ ಮೆಟ್ಟಿಲು ಹತ್ತುವ ಶಕ್ತಿ, ತಿಳವಳಿಕೆ ಅವರಿಗೆಇರುವುದಿಲ್ಲ. ಯುವ ವಕೀಲರುಅಂತಹವರಿಗೆಕಾನೂನು ಮಾರ್ಗದರ್ಶನ ನೀಡಿ ಸಹಾಯ ಮಾಡಬೇಕು. ಶಾಸಕಾಂಗ, ಕಾರ್ಯಾಂಗಗಳ ಲೋಪಗಳನ್ನು ನ್ಯಾಯಾಲಯಗಳಲ್ಲಿ ಪ್ರಶ್ನಿಸುವ, ಸರಿಪಡಿಸುವ ಸಾಮಾಜಿಕ ಕಳಕಳಿ ಎಲ್ಲರಿಗಿಂಥಾ ವಕೀಲರಲ್ಲಿ ಹೆಚ್ಚಾಗಿರಬೇಕುಎಂದು ಹೇಳಿದರು.

ಕಾನೂನು ವಿದ್ಯಾಲಯಗಳು ಮೌಲ್ಯಗಳ ತಳಹದಿಯಾಗಿರಬೇಕು. ವಿದ್ಯಾರ್ಥಿಗಳಲ್ಲಿಕೇವಲ ಕಾನೂನುಜ್ಞಾನ ಬೆಳೆಸುವುದಷ್ಟೇ ಅಲ್ಲದೆ , ಅವರಲ್ಲಿ ಮೌಲ್ಯ, ಸಂಸ್ಕಾರ, ಸಮಾಜಸ್ನೇಹಿ ಮನೋಭಾವ ಬೆಳೆಸಬೇಕು. ಇಂದು ವಿಜ್ಞಾನ ಮತ್ತು ತಂತ್ರಜ್ಞಾನ ನಾಗಲೋಟದಲ್ಲಿ ಓಡುತ್ತಿವೆ. ಈ ಕ್ಷೇತ್ರಗಳಲ್ಲಿ ಜಾಗತಿಕ ಮಟ್ಟದಲ್ಲಿ ನಾವು ಗುರುತಿಸಿಕೊಂಡಿದ್ದೇವೆ. ಆದರೂ ನಮ್ಮಲ್ಲಿ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿವೆ. ನ್ಯಾಯಾಲಯಗಳಲ್ಲಿ ಪ್ರಕರಣಗಳ ಇತ್ಯರ್ಥವೂ ವಿಳಂಬವಾಗುತ್ತಿದೆ ಇದಕ್ಕೆ ಕಾರಣವೇನು ಎಂಬುದನ್ನು ಹುಡುಕಿ ನಿವಾರಣೆ ಮಾಡುವ ಪ್ರಯತ್ನ ಮಾಡಬೇಕು ಎಂದು ಪ್ರೊ.ಸಿ.ಬಸವರಾಜು ಸಲಹೆ ಮಾಡಿದರು.

ಹೆಚ್.ಎಸ್. ಶೇಷಾದ್ರಿ ಸ್ಮಾರಕ ಪ್ರಶಸ್ತಿ.

ವಿದ್ಯೋದಯ ಫೌಂಡೇಶನ್‌ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಹೆಚ್.ಎಸ್. ರಾಜು ಮಾತನಾಡಿ, ಹಿರಿಯ ನ್ಯಾಯವಾದಿ, ವಿದ್ಯೋದಯ ಕಾನೂನು ಕಾಲೇಜಿನ ಸಂಸ್ಥಾಪಕರಾದ ದಿ. ಪ್ರೊ.ಹೆಚ್.ಎಸ್. ಶೇಷಾದ್ರಿಯವರದೂರದೃಷ್ಟಿ, ಚಿಂತನೆಗಳನ್ನು ಸಂಸ್ಥೆಯಲ್ಲಿ ಸಾಕಾರಗೊಳಿಸಲಾಗುತ್ತಿದೆ. ಇಲ್ಲಿ ಕಾನೂನು ಪದವಿ ಪಡೆದಅನೇಕರು ವಿವಿಧ ನ್ಯಾಯಾಲಯಗಳಲ್ಲಿ ನ್ಯಾಯಾಧೀಶರಾಗಿ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಹೇಳಿದರು. ಪ್ರತಿಭಾವಂತ ಕಾನೂನು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ಹಾಗೂ ಇತರರಿಗೆ ಪ್ರೇರಣೆ ನೀಡಲು ಕಾನೂನು ಪದವಿಯಲ್ಲಿ ಮೊದಲ ರ್‍ಯಾಂಕ್ ಪುರಸ್ಕೃತರಿಗೆ ವಿತರಿಸಲುರಾಜ್ಯಕಾನೂನು ವಿಶ್ವವಿದ್ಯಾಲಯದಲ್ಲಿ ಪ್ರೊ.ಹೆಚ್.ಎಸ್. ಶೇಷಾದ್ರಿ ಸ್ಮಾರಕ ಪ್ರಶಸ್ತಿ ಸ್ಥಾಪನೆ ಮಾಡಲಾಗುವುದು ಎಂದು ಹೆಚ್.ಎಸ್. ರಾಜು ಪ್ರಕಟಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಟ್ರಸ್ಟ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರೊ.ಕೆ.ಚಂದ್ರಣ್ಣ ಮಾತನಾಡಿ, ವಕೀಲರು ಸಮಾಜ ಮುಖಿಗಳಾಗಬೇಕು, ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಕಾನೂನು ನೆರವುದೊರಕಿಸುವ ಕಾಳಜಿವಹಿಸಬೇಕು ಎಂದು ಮನವಿ ಮಾಡಿದರು.

ಕಾಲೇಜಿನ ಪ್ರಾಚಾರ್ಯರಾದ ಶಮಾ ಸೈದಿ ಸ್ವಾಗತಕೋರಿ, ಅತಿಥಿಗಳನ್ನು ಪರಿಚಯಿಸಿದರು. ಸಹಾಯಕ ಪ್ರಾಧ್ಯಾಪಕರು, ಶೈಕ್ಷಣಿಕ ಸಮಿತಿ ಸಂಚಾಲಕರಾದಡಾ.ಎ. ನಾರಾಯಣಸ್ವಾಮಿಯವರು ಪ್ರಾಸ್ತಾವಿಕ ನುಡಿಯಲ್ಲಿ, ಈ ಬಾರಿಕಾಲೇಜಿನ ಸುಮಾರು 240 ವಿದ್ಯಾರ್ಥಿಗಳಿಗೆ ಕಾನೂನು ಪದವಿ ಪ್ರದಾನ ಮಾಡಲಾಗುತ್ತಿದೆಎಂದು ಹೇಳಿದರು.

ಟ್ರಸ್ಟಿಗಳಾದ ಕಸ್ತೂರಿರಮೇಶ್ ಪೈ, ಕೃಷ್ಣಯ್ಯ, ಆರ್.ಎ. ಸುರೇಶ್ ಕುಮಾರ್, 5 ವರ್ಷದ ಪದವಿ ವಿದ್ಯಾರ್ಥಿಗಳ ಮಾರ್ಗದರ್ಶಕರಾದಎನ್.ಜಿ. ಮಂಜುನಾಥ್, 3 ವರ್ಷದ ಮಾರ್ಗದರ್ಶಕಡಾ.ಎಸ್. ಗಂಗಾಧರ್, ಶೈಕ್ಷಣಿಕ ಸಮಿತಿ ಸದಸ್ಯರಾದ ಕೆ.ವಿ. ರೂಪ, ಕೆ.ಎಸ್. ಪುಷ್ಪ ಹಾಗೂ ಕಾಲೇಜಿನ ಬೋಧಕ ವರ್ಗದವರು ಭಾಗವಹಿಸಿದ್ದರು.

ಲಕ್ಷಾಂತರ ರೂ ಕೊಟ್ಟು ಜಮೀನು ಖರೀದಿ ಮಾಡಿದರೂ ನಿತ್ಯ ಅಕ್ಕಪಕ್ಕದವರ ಕಿರುಕಿಳದ ಜೊತೆಗೆ ಅಧಿಕಾರಿಗಳ ದೌರ್ಜನ್ಯ ಎದುರಿಸುವ ಪರಿಸ್ಥಿತಿ ಎದುರಾಗಿದೆ ರೈತ ಚಂದ್ರೇಗೌಡ ಆರೋಪ

ಸೂರ್ಯಪ್ರಗತಿನ್ಯೂಸ್.ಕಾಂ

ತುರುವೇಕೆರೆ:–ಮಾಯಸಂದ್ರ ಹೋಬಳಿ ಕಾಡಲ್ ಗಿಡದಕಾವಲು ಸರ್ವೆ ನಂಬರ್ 7ರಲ್ಲಿ ನಾಲ್ಕು ಎಕರೆ ಜಮೀನನ್ನು ನಾನು ಈ ಹಿಂದೆ 2024ರಲ್ಲಿ ಕ್ರಯಕ್ಕೆ ಪಡೆದು ಜಮೀನಿನಲ್ಲಿ ಅನುಭವದಲ್ಲಿ ಇದ್ದೇನೆ, ಆದರೆ ಕೆಲವರು ಯಾವದು ದಾಖಲೆ ಹೊಂದಿಲ್ಲದಿದ್ದರೂ ನಾವೇ ಉಳಿಮೆ ಮಾಡಿಕೊಂಡು ಹಿಂದಿನಿಂದಲೂ ಬಂದಿದ್ದೇವೆ ಎಂದು ನನ್ನ ಮೇಲೆ ದೌರ್ಜನ್ಯ ಎಸಗುವುದಲ್ಲದೆ ನನಗೆ ಬೆದರಿಕೆ ಹಾಕುತ್ತಾರೆ ಇದರ ಜೊತೆಗೆ ತಾಲ್ಲೂಕಿನ ಕಂದಾಯ ಅಧಿಕಾರಿಗಳು ಹೈ ಕೋರ್ಟ್ ಆದೇಶ ಎಂದು ಹೇಳಿಕೊಂಡು ನನ್ನ ಜಮೀನಿನಲ್ಲಿ ನನಗೆ ಅರಿವಿಲ್ಲದಂತೆ ಸರ್ವೆ ಮಾಡಿಸುವುದು ಜಿಪಿಎಸ್ ಪೋಟೋ ತೆಗೆಸಿಕೊಳ್ಳುವ ಕೆಲಸಕ್ಕೆ ಮುಂದಾಗಿದ್ದಾರೆ, ಅವರ ಕರ್ತವ್ಯಕ್ಕೆ ನಾನು ಅಡ್ಡಿಪಡಿಸುವುದಿಲ್ಲ ಆದರೆ ಮಾಲಿಕರಾದ ನನಗೆ ಯಾವುದೇ ನೋಟೀಸ್ ನೀಡದೆ ತಹಶಿಲ್ದಾರ್ ಹಾಗೂ ಕಂದಾಯ ತನಿಖಾಧಿಕಾರಿಗಳು ಹಾಗೂ ಸರ್ವೆ ಇಲಾಖಾ ಸಿಬ್ಬಂದಿ ನನ್ನ ಜಮೀನಿನಲ್ಲಿ ಸರ್ವೆ ಮಾಡಿಸುವುದು ಹಾಗೂ ಅತಿಕ್ರಮ ಪ್ರವೇಶಿಸುವುದು ಎಷ್ಟು ಸರಿ. ನನ್ನ ಬಳಿ ದಾಖಲಾತಿಗಳಿವೆ ಹಾಗೂ ಇದೇ ಕಂದಾಯ ಇಲಾಖೆಯ ದಾಖಲಾತಿಯ ಅನುಸಾರವಾಗಿಯೇ ನಾನು ಈ ಹಿಂದಿನ ಜಮೀನಿನ ಮಾಲೀಕರ ಬಳಿಯಿಂದ ಜಮೀನನ್ನು ಕ್ರಯಕ್ಕೆ ಪಡೆದಿದ್ದೇನೆ ಆದರೆ ಇಂದು ಇದೇ ಕಂದಾಯ ಇಲಾಖೆಯ ಅಧಿಕಾರಿಗಳು ಕಾಡಲ್ ಗಿಡದಕಾವಲು ಗ್ರಾಮದ ಕೆಲ ಪಹಣಿಗಳಲ್ಲಿ ಸರ್ವೆನಂಬರ್ ಬದಲಾಗಿ ಚಾಲ್ತಿ ನಂಬರ್ ನಮೂದು ಮಾಡಿದ್ದಾರೆಂದು ಇದನ್ನು ಸರಿಪಡಿಸಲು ಹೈ ಕೋರ್ಟ್ ಆದೇಶವಿದೆ ಎಂದು ಹೇಳುತ್ತಾರೆ ಆದರೆ ಇದೇ ಗ್ರಾಮದ ಸರ್ವೆ ನಂಬರ್ ನಲ್ಲಿ ನನಗೆ ನಾಲ್ಕು ಎಕರೆ ಪಹಣಿ ಇದ್ದರೂ ಕೂಡ ನನಗೆ ಯಾವುದೇ ನೋಟೀಸ್ ನೀಡದೆ ನನ್ನ ಜಮೀನನ್ನು ಅಳತೆ ಮಾಡಲು ಮುಂದಾಗಿದ್ದಾರೆ ಇನ್ನು ಇಲ್ಲಿನ ಕೆಲವರು ನನ್ನ ಜಮೀನಿನಲ್ಲಿ ನಟ್ಟಿದ್ದ ತಂತಿ ಕಂಬಗಳು ಹಾಗೂ ಸಿ.ಸಿ. ಕ್ಯಾಮರಾ ಕಿತ್ತೊಗೆದಿದ್ದಾರೆ ಇದು ಹೀಗೆ ಮುಂದುವರಿದರೆ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ಮಾಡಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ಅಳಲು ತೋಡಿಕೊಂಡರು.

ಗರ್ಭಕಂಠ ಕ್ಯಾನ್ಸರ್ ಲಸಿಕೆ ಅಭಿಯಾನ

ಸೂರ್ಯಪ್ರಗತಿನ್ಯೂಸ್.ಕಾಂ

ಮಧುಗಿರಿ., ಗರ್ಭಕಂಠ ಕ್ಯಾನ್ಸರ್ ತಡೆಯುವುದಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಯೋಗದಲ್ಲಿ ಲಸಿಕೆ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಾರ್ವಜನಿಕ ಆಸ್ಪತ್ರೆ ವೈದ್ಯಾಧಿಕಾರಿ ಡಾ. ಮೋಹನ್ ತಿಳಿಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಆರೋಗ್ಯ ಇಲಾಖೆ ರೋಟರಿ ಮಧುಗಿರಿ ಹಾಗೂ ವಿವಿಧ ಇಲಾಖೆ ಸಹಯೋಗದಲ್ಲಿ ನಡೆದ ಎಚ್ ಪಿ ವಿ ಲಸಿಕ ಅಭಿಯಾನ ಕಾರ್ಯಕ್ರಮದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು 14ರ ವಯೋಮಾನದ ಒಳಗಿನ ಹೆಣ್ಣುಮಕ್ಕಳಿಗೆ ಲಸಿಕೆಯನ್ನು ಉಚಿತವಾಗಿ ನೀಡುವ ಅಭಿಯಾನವನ್ನು ಪ್ರಾರಂಭಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಗರ್ಭಕಂಠದ ಕ್ಯಾನ್ಸರ್ ಹಾಗೂ ಸೋಂಕು ಹರಡುವುದು ಮತ್ತು ಅಕಾಲಿಕ ಮರಣ ಹೊಂದುವ ಪ್ರಮಾಣ ಹೆಚ್ಚಾಗುತ್ತಿದೆ ಈ ಕಾರಣದಿಂದಾಗಿ ಉಚಿತ ಲಸಿಕ ಅಭಿಯಾನ ಕಾರ್ಯಕ್ರಮ ಪ್ರಾರಂಭಿಸಿದ್ದು ತಾಲೂಕಿನ ಯಾವೊಬ್ಬ ಹೆಣ್ಣು ಮಗು ಲಸಿಕೆ ಪಡೆಯುವುದರಿಂದ ವಂಚಿತವಾಗಬಾರದು ಎಂಬ ಗುರಿಯನ್ನು ಆರೋಗ್ಯ ಇಲಾಖೆ ಹೊಂದಿದೆ ಎಂದು ತಿಳಿಸಿದರು. ಆರೋಗ್ಯ ಇಲಾಖೆಯ ಧರಣೇಶ್ ಗೌಡ ಮಾತನಾಡಿ

ಸರ್ಕಾರಿ ಆಸ್ಪತ್ರೆಗಳಲ್ಲಿ ಲಸಿಕೆಯನ್ನು ಉಚಿತವಾಗಿ ನೀಡುತ್ತಿದ್ದು ಖಾಸಗಿಯಾಗಿ ಹೆಚ್ಚು ಹಣ ಪಾವತಿಸಿ ಪಡೆಯಬೇಕಾಗುತ್ತದೆ. ಸರ್ಕಾರ ನೀಡುವ ಸೌಲಭ್ಯವನ್ನು ಪಡೆದು ಮುಂದೆ ಬರಬಹುದಾದಂತಹ ರೋಗಗಳಿಂದ ಮಕ್ಕಳನ್ನು ಮುಕ್ತರನ್ನಾಗಿ ಮಾಡಿ ಎಂದು ಪೋಷಕರಿಗೆ ಕರೆ ನೀಡಿದರು. ಲಸಿಕೆ ಬಗ್ಗೆ ಯಾವುದೇ ಆತಂಕ ಬೇಡ ಅಕಾಲಿಕ ಸೋಂಕು ಮತ್ತು ಸಾವಿನಿಂದ ಪಾರು ಮಾಡಿ ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಉಪವಿಭಾಗಾಧಿಕಾರಿ ಗೋಟೂರು ಶಿವಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ಕೆ ಎನ್ ಹನುಮಂತ ರಾಯಪ್ಪ ತಜ್ಞವೈದ್ಯರಾದ ಡಾಕ ರೇಖಾ, ಸಿ ಡಿ ಪಿ ಓ ಕುಮಾರ್ ನಾಯಕ ಹಾಗೂ ಆಸ್ಪತ್ರೆ ಸಿಬ್ಬಂದಿ ಇದ್ದರು.

ಇಂದಿನ ಕೃತಕ ಬುದ್ದಿಮತ್ತೆಯ ಕಾಲದಲ್ಲಿ ಬುದ್ದಿಮಂತ ಮಕ್ಕಳಿಗೆ ಬುದ್ದಿವಂತ ಶಿಕ್ಷಕರ ಅಗತ್ಯ ಇದೆ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು– ಇಂದಿನ ಬುದ್ದಿಮಂತ ಮಕ್ಕಳಿಗೆ ಬೋಧನೆ ಮಾಡಲು ಬುದ್ದಿವಂತ ಶಿಕ್ಷಕರ ಅಗತ್ಯವೂ ಇದೆ.ಹಾಗಾಗಿ ಕೃತಕ ಬುದ್ದಿಮತ್ತೆಯ ಬಗ್ಗೆ ಮೊದಲು ಶಿಕ್ಷಕರು ಜ್ಞಾನವನ್ನು ಸಂಪಾದಿಸಿ, ತದನಂತರ ಮಕ್ಕಳಿಗೆ ಹೇಳಿಕೊಡುವ ಮೂಲಕ ಅವರನ್ನು ಕೌಶಲ್ಯವಂತರನ್ನಾಗಿ ಮಾಡಬೇಕೆಂದು ಆಗ್ನೇಯ ಪದವಿಧರರ ಕ್ಷೇತ್ರದ ಅಭ್ಯರ್ಥಿ ಶಶಿ ಹುಲಿಕುಂಟೆ ಮಠ್ ಉಪನ್ಯಾಸಕರಲ್ಲಿ ಮನವಿ ಮಾಡಿದ್ದಾರೆ.

ನಗರದ ಸಿದ್ದಗಂಗಾ ಕಾಲೇಜಿನ ಡಾ.ಶ್ರೀಶಿವಕುಮಾರಸ್ವಾಮೀಜಿ ಸಭಾಂಗಣದಲ್ಲಿ ತುಮಕೂರು ವಿವಿ ಕಾಲೇಜು ಅಧ್ಯಾಪಕರ ಸಂಘ(ರಿ), ವತಿಯಿಂದ ಕೃತಕ ಬುದ್ದಿಮತ್ತೆ ಮತ್ತು ಭಾರತದಲ್ಲಿ ಉನ್ನತ ಶಿಕ್ಷಣ: ಅವಕಾಶಗಳು ಮತ್ತು ಸವಾಲುಗಳು ಎಂಬ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡು ಮಾತನಾಡಿದ ಅವರು,ಕೃತಕ ಬುದ್ದಿಮತ್ತೆ(ಎಐ)ನಿಂದ ಯುವ ಸಮೂಹದಲ್ಲಿ ಸಾಕಷ್ಟು ಬದಲಾವಣೆ ತರಲು ಅವಕಾಶವಿದೆ.ಈ ನಿಟ್ಟಿನಲ್ಲಿ ಇಂದಿನ ವಿಚಾರ ಸಂಕಿರಣ ಅತ್ಯಂತ ಮಹತ್ವ ಪಡೆದಿದೆ ಎಂದರು.

ಆಗ್ನೇಯ ಪದವಿಧರರ ಕ್ಷೇತ್ರದ ಚುನಾವಣೆಯ ಹೊರತಾಗಿಯೂ ಕಳೆದ ಎರಡು ವರ್ಷಗಳಿಂದ ಶಿಕ್ಷಕರ ಕ್ಷೇತ್ರದ ಸಮಸ್ಯೆಗಳ ಪರಿಹಾರದತ್ತ ಗಮನಹರಿಸುವ ಕೆಲಸ ಮಾಡುತ್ತಲೇ ಬಂದಿದ್ದೇನೆ.ಶಿಕ್ಷಕರೇ ಮತದಾರರಾಗಿರುವ ಈ ಕ್ಷೇತ್ರದ ಅಭಿವೃದ್ದಿಗೆ ನಾನು ಬದ್ದವಾಗಿದ್ದು,ಹಳೆಯ ಪಿಂಚಣಿ ಪದ್ದತಿಯನ್ನು ಇಂದಿನ ಸರಕಾರವೇ ಘೋಷಣೆ ಮಾಡಲಿದೆ.ವಿಧಾನಪರಿಷತ್ ಸದಸ್ಯರಾಗಿರುವ ಪುಟ್ಟಣ್ಣಯ್ಯ ಮತ್ತು ಡಿ.ಟಿ.ಶ್ರೀನಿವಾಸ ಅವರುಗಳ ಸಹಕಾರದೊಂದಿಗೆ ಈಗಾಗಲೇ ವಿಚಾರವನ್ನು ಮುಖ್ಯಮಂತ್ರಿಗಳ ಮುಂದಿಟ್ಟಿದ್ದು, ಸಿ.ಎಂ. ಡಿ.ಕೆ.ಶಿವಕುಮಾರ ಅವರು, ನಮ್ಮ ಅವಧಿಯಲ್ಲಿಯೇ ಸರಕಾರಿ ನೌಕರರಿಗೆ ಓಟಿಎಸ್ ಜಾರಿಗೆ ತರುವ ಭರವಸೆ ನೀಡಿದ್ದಾರೆ.ಓಟಿಎಸ್ ಅತ್ಯಂತ ಅಗತ್ಯವಾಗಿದೆ. ಸರಕಾರಿ ನೌಕರರ ಮಕ್ಕಳು,ತಂದೆ, ತಾಯಿಗಳನ್ನು ಸಾಕಬೇಕೆಂದರೆ ಹಳೆಯ ಪಿಂಚಿಣಿ ವ್ಯವಸ್ಥೆ ಜಾರಿಗೆ ಬರಬೇಕಾಗಿದೆ ಎಂದು ಶಶಿ ಹುಲಿಕುಂಟೆ ಮಠ್ ನುಡಿದರು.

ಕೃತಕ ಬುದ್ದಿಮತ್ತೆ ಮತ್ತು ಭಾರತದಲ್ಲಿ ಉನ್ನತ ಶಿಕ್ಷಣ ಅವಕಾಶಗಳು ಮತ್ತು ಸವಾಲುಗಳು ಎಂಬ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿದ ಕಾಲೇಜು ಶಿಕ್ಷಣ ಇಲಾಖೆಯ ಬೆಂಗಳೂರು ವಲಯ ಜಂಟಿ ನಿರ್ದೇಶಕ ಪ್ರೊ. ಕೆ. ರಾಮಕೃಷ್ಣ ರೆಡ್ಡಿ ಮಾತನಾಡಿ,ಎಲ್ಲಾ ವರ್ಗ, ವಿಷಯವನ್ನು ಇಂದು ಎಐ ಅವರಿಸಿಕೊಂಡಿರುವ ಕಾಲದಲ್ಲಿ ಎಐ ಕುರಿತ ಈ ವಿಚಾರ ಸಂಕಿರಣ ಅತ್ಯಂತ ಪ್ರಸ್ತುತವಾಗಿದೆ.ಇಲ್ಲಿ ಮಂಡನೆಯಾಗುವ ಲೇಖನಗಳನ್ನು ಇತರೆ ಶಿಕ್ಷಕರು ಓದಿ, ಅವುಗಳ ಬಗ್ಗೆ ಚರ್ಚೆ ನಡೆಸುವ ಅಗತ್ಯವಿದೆ.ಎಐ ಬಳಕೆ ಮಾಡಿಕೊಂಡು ಹೇಗೆ ನಮ್ಮ ಬೋಧನಾ ಕೌಶಲ್ಯವನ್ನು ಹೆಚ್ಚಿಸಿಕೊಂಡು, ಅದನ್ನು ಮಕ್ಕಳಿಗೆ ತಲುಪಿಸುವುದು ಎಂಬ ಬಗ್ಗೆ ಶಿಕ್ಷಕರು ರೂಢಿಸಿಕೊಳ್ಳಬೇಕಿದೆ.ಕಾಲೇಜು ಶಿಕ್ಷಣ ಇಲಾಖೆ ಅಧ್ಯಾಪಕ ಸ್ನೇಹಿಯಾಗಿ ಕೆಲಸ ಮಾಡುತ್ತಿದೆ.ಪ್ರತಿಭಾವಂತರನ್ನು ಆಯ್ಕೆಮಾಡಿಕೊಂಡು, ಅವರಿಗೆ ಬೇಕಾದ ಮೂಲಭೂತ ಸೌಕರ್ಯಗಳು, ಪಠ್ಯಕ್ರಮದ ಬದಲಾವಣೆ ಮಾಡಿ, ಗುಣಮಟ್ಟದ ಶಿಕ್ಷಣ ದೊರೆಯಬೇಕೆಂಬ ಆಶಯದಿಂದ ಕೆಲಸ ಮಾಡುತ್ತಿದೆ.ಅಧ್ಯಾಪಕರು ತಮ್ಮ ವಿಷಯಗಳಿಗೆ ಸಂಬಂಧಿಸಿದಂತೆ ಮಕ್ಕಳಿಗೆ ಎಐ ಕಲಿಸುವತ್ತ ಹೊಸ ಪಠ್ಯ ವಿಷಯಗಳನ್ನು ಪರಿಚಯಿಸುವ ಅಗತ್ಯವಿದೆ ಎಂದರು. ಯುವಕರಾಗಿರುವ ಶಶಿ ಹುಲಿಕುಂಟೆ ಮಠ್ ಅವರು ವಿಚಾರವಂತರಾಗಿದ್ದು,ಅಧ್ಯಾಪಕರ ಸಮಸ್ಯೆಗಳ ಪರಿಚಯವಿದೆ. ಅವರಂತಹ ದೂರದೃಷ್ಟಿಯುಳ್ಳ ವ್ಯಕ್ತಿಗಳು ಶಿಕ್ಷಕರ ಕ್ಷೇತ್ರದಿಂದ ಮೇಲ್ಮನೆ ಪ್ರವೇಶಿಸಿದರೆ ನಮ್ಮನ್ನು ಸಮರ್ಥವಾಗಿ ಪ್ರತಿನಿಧಿಸುತ್ತಾರೆ ಎಂಬ ನಂಬಿಕೆ ಇದೆ. ಕಾಲೇಜು ಅಧ್ಯಾಪಕರು ತಮ್ಮ ಕಾಲೇಜಿನಲ್ಲಿ ಕಲಿಯುವ ಪ್ರತಿ ಹೆಣ್ಣು ಮಗುವಿಗು ಅಜೀಂ ಪ್ರೇಮಜಿ ಪೌಂಡೇಷನ್ ವತಿಯಿಂದ ನೀಡುವ ದೀಪಿಕಾ ವಿದ್ಯಾರ್ಥಿ ವೇತನ ದೊರೆಯುವಂತೆ ಮಾಡಬೇಕು. ಬೋಧನೆಯ ಜೊತೆಗೆ, ಸರಕಾರದಿಂದ ದೊರೆಯುವ ವಿದ್ಯಾರ್ಥಿ ವೇತನ ಸೇರಿದಂತೆ ಸವಲತ್ತುಗಳ ಬಗ್ಗೆಯೂ ಮಕ್ಕಳಿಗೆ ತಿಳಿಸಬೇಕು ಎಂದು ಪ್ರೊ.ಕೆ.ರಾಮಕೃಷ್ಣರೆಡ್ಡಿ ತಿಳಿಸಿದರು.

ಕೃತಕ ಬುದ್ದಿಮತ್ತೆ ಮತ್ತು ಭಾರತದಲ್ಲಿ ಉನ್ನತ ಶಿಕ್ಷಣ ಅವಕಾಶಗಳು ಮತ್ತು ಸವಾಲುಗಳು ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ದಿಕ್ಸೂಚಿ ಭಾಷಣ ಮಾಡಿದ ಮಂಡ್ಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಕೆ.ಶಿವಚಿತ್ತಪ್ಪ, ಕೃತಕ ಬುದ್ದಿಮತ್ತೆ ಎಂಬುದು 21ನೇ ಶತಮಾನದ ಕ್ರಾಂತಿ. ಕೈಗಾರಿಕಾ ಕ್ರಾಂತಿ, ಮಾಹಿತಿ ತಂತ್ರಜ್ಞಾನದ ಕ್ರಾಂತಿಯ ನಂತರ ಆಗಿರುವ ಮೂರನೇ ದೊಡ್ಡ ಕ್ರಾಂತಿ ಎಐ. ಇದನ್ನು ಆಯಾಯ ವಿಷಯಗಳಿಗೆ ಅನುಗುಣವಾಗಿ ಪದವಿ ತರಗತಿಗಳಿಗೆ ಎಐ ಪರಿಚಯಿಸುವ ಹೊಸ ಪಠ್ಯಕ್ರಮವನ್ನು ಅಧ್ಯಾಪಕರು ಮಾಡಬೇಕಾಗಿದೆ.ಎಐ ಎಂಬುದು ಜ್ಞಾನ ಆಧಾರಿತವಾಗಿದ್ದು, ಮಾಹಿತಿಗಳ ಕಣಜವಾಗಿದೆ. ಅದನ್ನು ಮಕ್ಕಳಿಗೆ ಪರಿಚಯಿಸುವ ಕೆಲಸ ಆಗಬೇಕು. ತಂತ್ರಜ್ಞಾನ ಆಧಾರಿತ ಭೋಧನೆ, ಕ್ಲೌಡ್ ಕಂಪ್ಯೂಟ್ ನಿಂದ ನಾವು ಕೂಡ ಇಂದಿನ ಅಗತ್ಯಕ್ಕೆ ತಕ್ಕಂತೆ ಅಪ್‌ಡೇಟ್ ಆಗಬೇಕಿದೆ ಎಂದರು.

ಪ್ರಸ್ತುತ ಎಐ ಬಳಕೆಯಲ್ಲಿ ಭಾರತ ಮೂರನೇ ಸ್ಥಾನದಲ್ಲಿದೆ.2024ರಲ್ಲಿ ಶೇ24ರಷ್ಟು ಎಐ ಬಳಕೆ ಇದ್ದರೆ, ಪ್ರಸ್ತುತ ಶೇ44ಕ್ಕೆ ಹೆಚ್ಚಳವಾಗಿದೆ.ತುಮಕೂರು ವಿವಿ ಅಧ್ಯಾಪಕರ ಸಂಘ ನಿರಂತರವಾಗಿ ಇಂತಹ ಕಾರ್ಯಕ್ರಮಗಳ ಮೂಲಕ ಸಕ್ರಿಯರಾಗಿದ್ದು, ಇಂತಹ ಮತ್ತಷ್ಟು ವಿಚಾರ ಸಂಕಿರಣಗಳ ಮೂಲಕ ಪಠ್ಯಕ್ರಮದ ನಿರಂತರ ಬದಲಾವಣೆಯ ಜೊತೆಗೆ, ಹೊಸತನದ ಕಲಿಸುವಿಕೆಯತ್ತ ನಾವೆಲ್ಲರೂ ಗಮನಹರಿಸಬೇಕಾಗಿದೆ ಎಂದರು.

ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ತುಮಕೂರು ವಿವಿ ಅಧ್ಯಾಪಕರ ಸಂಘದ ಅಧ್ಯಕ್ಷರಾದ ಡಾ.ಜಿ.ತಿಪ್ಪೇಸ್ವಾಮಿ ವಹಿಸಿದ್ದರು. ಕಾಲೇಜು ಶಿಕ್ಷಣ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಡಾ.ಟಿ.ಗಂಗಾಧರಯ್ಯ, ಪ್ರಾಂಶುಪಾಲರಾದ ಪ್ರೊ .ಟಿ. ಡಿ.ವಸಂತ, ಪ್ರೊ.ಕೆ.ಸಿ.ಬಸವರಾಜು, ಡಾ.ಎನ್.ಪಿ.ಶಿವಾನಂದಯ್ಯ, ಡಾ.ಡಿ.ಶಿವಲಿಂಗಯ್ಯ, ಡಾ.ಆರ್.ಪುಟ್ಟರಾಜು, ತುಮಕೂರು ವಿವಿಯಯ ಪ್ರೊಪ ರಮಶಿವಯ್ಯ,ತುಮಕೂರು ವಿವಿ ಕಾಲೇಜು ಅಧ್ಯಾಪಕರ ಸಂಘದ ಪದಾಧಿಕಾರಿಗಳಾದ ಡಾ.ನಾಗರಾಜು. ಎಂ.ಎಸ್, ಹನುಮಂತರಾಯಪ್ಪ, ಡಾ.ರೇಣುಕಾ ಪ್ರಸಾದ್, ಡಾ.ಹೊನ್ನಾಂಜನೇಯ, ಡಾ.ನಳಿನಿ ಎನ, ಡಾ.ನಾಗರಾಜು. ಜಿ.ಕೆ, ಡಾ.ಜಯಪ್ರಕಾಶ್.ಪಿ.ಸಿ. ಹಾಗೂ ಎಲ್ಲಾ ನಿರ್ದೇಶಕರು ಉಪಸ್ಥಿತರಿದ್ದರು.

ಕೃತಕ ಬುದ್ದಿಮತ್ತೆ ಮತ್ತು ಭಾರತದಲ್ಲಿ ಉನ್ನತ ಶಿಕ್ಷಣ ಅವಕಾಶಗಳು ಮತ್ತು ಸವಾಲುಗಳು ಎಂಬ ವಿಚಾರಸಂಕಿರಣದಲ್ಲಿ 89 ಲೇಖನಗಳು ಮಂಡನೆಯಾದವು. ನೂರಾರು ಉಪನ್ಯಾಸಕರು ವಿಚಾರ

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

ಶಿರಾ ತಾ.ಎಲ್ಲಾ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಕಲ್ಕೆರೆ ರವಿಕುಮಾರ್ ನೋಟ್ ಪುಸ್ತಕ ವಿತರಣೆ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಜೆಡಿಎಸ್ ಮುಖಂಡ ಕಲ್ಕೆರೆ ರವಿಕುಮಾರ್‌ಅವರು ಕಳೆದ 14 ವರ್ಷಗಳಿಂದ ಶಿರಾ ತಾಲ್ಲೂಕಿನ ಎಲ್ಲಾ ಸರ್ಕಾರಿ ಶಾಲೆ, ಕಾಲೇಜು ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ ವಿತರಿಸುತ್ತಿದ್ದಾರೆ. ಈ ಸಾಲಿನ ಶೈಕ್ಷಣಿಕ ವರ್ಷಾರಂಭದಲ್ಲಿ ಅವರು ತಾಲ್ಲೂಕಿನ ಶಾಲಾ ಕಾಲೇಜಿನ ಎಲ್ಲಾ ಮಕ್ಕಳಿಗೆ ಪುಸ್ತಕ ವಿತರಿಸಿದರು.

ಶಿರಾ ತಾಲ್ಲೂಕಿನ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಸಾಧನೆ ಮಾಡಬೇಕು ಎಂದು ಅವರನ್ನು ಪ್ರೇರಿಪಿಸಲು ಪ್ರತಿ ವರ್ಷ ಶಾಲೆ, ಕಾಲೇಜುಗಳಿಗೆ ತೆರಳಿ ನೋಟ್ ಪುಸ್ತಕ ಮತ್ತಿತರ ಪಠ್ಯಪರಿಕರಗಳನ್ನು ವಿತಿಸುತ್ತಿರುವುದಾಗಿ ಕಲ್ಕೆರೆ ರವಿಕುಮಾರ್ ಹೇಳಿದರು.

ಈ ವೇಳೆ ತುಮುಲ್ ನಿರ್ದೇಶಕ ಎಸ್,ಆರ್. ಗೌಡ, ಜಿಲ್ಲಾ ಪಂಚಾಯ್ತಿ ಮಾಜಿ ಉಪಾಧ್ಯಕ್ಷ ಮುದಿಮಡು ರಂಗಸ್ವಾಮಯ್ಯ ಸೇರಿದಂತೆ ತಾಲ್ಲೂಕಿನ ಜೆಡಿಎಸ್ ಮುಖಂಡರು ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು.

ಪ್ರೀತಿಯ ನೆಚ್ಚಿನ ಓದುಗ ಮಿತ್ರರೇ ಸೂರ್ಯ ಪ್ರಗತಿ ಕನ್ನಡ ದಿನಪತ್ರಿಕೆಯ ಸುದ್ದಿಗಳನ್ನ ಅಂತರ್ಜಾಲ ತಾಣ ವೆಬ್ ಆವೃತ್ತಿ https://suryapragathi.com ನಲ್ಲಿ ಹಾಗೂ https://epaper.surya pra gathi.com ನಲ್ಲಿ ಓದಬಹುದು – ನೋಡಬಹುದು ಹೆಚ್ಚಿನ ಮಾಹಿತಿಗಾಗಿ 9901010109

ಮಾದರಿ ನಗರ ನಿರ್ಮಾಣದ ಕನಸು: ಕೆ.ಶೇಷಾದ್ರಿ

ಸೂರ್ಯಪ್ರಗತಿನ್ಯೂಸ್.ಕಾಂ

ರಾಮನಗರ: ಮಾದರಿ ನಗರ ನಿರ್ಮಾಣ ನಮ್ಮ ಕನಸಾಗಿದ್ದು ನನಸು ಮಾಡಲು ಬೇಕಾಗಿರುವ ಎಲ್ಲಾ ಅಭಿವೃದ್ಧಿ ಕೆಲಸಗಳನ್ನು ಹಂತ ಹಂತವಾಗಿ ಮಾಡಲಾಗುತ್ತಿದೆ ಎಂದು ನಗರಸಭಾಧ್ಯಕ್ಷ ಕೆ.ಶೇಷಾದ್ರಿ(ಶಶಿ) ಹೇಳಿದರು.

ನಗರದ ಎರಡನೇ ವಾರ್ಡಿನ ವಿನಾಯಕನಗರ ಬಡಾವಣೆಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸೋಮವಾರ ಗುದ್ದಲಿಪೂಜೆ ನೆರವೇರಿಸಿ ಮಾತನಾಡಿದ ಅವರು, ವಿನಾಯಕನಗರ ವ್ಯಾಪ್ತಿಯ ಬಡಾವಣೆಯ ವಾಸಿ ರಾಜು ಮತ್ತು ಬಡಾವಣೆಯ ಸಾರ್ವಜನಿಕರು ರಸ್ತೆ ಅಭಿವೃದ್ಧಿ ಪಡಿಸುವಂತೆ ಮನವಿ ಮಾಡುತ್ತಲೇ ಬಂದಿದ್ದರು. ಅವರ ಮನವಿ ಮೇರೆಗೆ ನಗರೋತ್ಥಾನ ಅಡಿಯಲ್ಲಿ ನಗರಸಭೆ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಾಗಿದೆ. ಶೀಘ್ರದಲ್ಲಿಯೇ ಈ ಭಾಗದ ಜನತೆಗೆ ಉತ್ತಮ ಹಾಗೂ ಗುಣಮಟ್ಟದ ರಸ್ತೆ ಲಭಿಸಲಿದ್ದು, ಹಲವು ವರ್ಷಗಳ ರಸ್ತೆ ಸಮಸ್ಯೆಗೆ ಮುಕ್ತಿ ಸಿಗಲಿದೆ ಎಂದರು.

1.36 ಕೋಟಿ ವೆಚ್ಚದಲ್ಲಿ ಕಾಮಗಾರಿ ಕೈಗೊಳ್ಳಲಾಗಿದೆ. ವಿನಾಯಕನಗರ ಬಡಾವಣೆ 9ನೇ ಬೀದಿ ಪ್ರಭು ಮನೆಯಿಂದ ರಾಮಪ್ಪ ಮನೆವರೆಗೆ, 6ನೇ ಬೀದಿ ಹೊನ್ನಮ್ಮ ಮನೆಯಿಂದ ಶಿವಣ್ಣ ಮನೆವರೆಗೆ, ವಿಜಯನಗರ ಚರ್ಚ್ ರಸ್ತೆಯಿಂದ ಅಪ್ಪಾಜಿ ಮನೆ ವರೆಗೆ, ನರಸಮ್ಮ ಮನೆ ಬೀದಿ, ಸತೀಶ್ ಮನೆಯಿಂದ ಜಿ.ಶಿವಲಿಂಗಯ್ಯ ಮನೆ ವರೆಗೆ ಸಿಮೆಂಟ್ ರಸ್ತೆ ಆಗಲಿದೆ. ವಾಟರ್ ಟ್ಯಾಂಕ್ ಸರ್ಕಲ್‌ನಿಂದ ಕಾಮಣ್ಣನಗುಡಿ ಸರ್ಕಲ್, ಶ್ರೀರಾಮ ದೇವಾಲಯದಿಂದ ಆಂಜನೇಯ ದೇವಾಲಯದ ನಾಣಿ ಮನೆವರೆಗೆ ರಸ್ತೆ ಡಾಂಬರೀಕರಣವಾಗಲಿದೆ ಎಂದು ಹೇಳಿದರು.

ನಗರಸಭೆ ಎಂಜಿನಿಯರ್‌ಗಳು ನಿರಂತರವಾಗಿ ಕಾಮಗಾರಿಗಳ ಮೇಲುಸ್ತುವಾರಿ ನೋಡಿಕೊಳ್ಳಲಿದ್ದು ಎಲ್ಲೂ ಕಾಮಗಾರಿಗಳಲ್ಲಿ ಲೋಪದೋಷ ಆಗದಂತೆ ಎಚ್ಚರಿಕೆ ವಹಿಸಬೇಕೆಂದು ತಿಳಿಸಲಾಗಿದೆ. ಗುತ್ತಿಗೆದಾರರೂ ಕೂಡ ಸ್ಥಳೀಯರಾಗಿದ್ದು ಇದುವರೆವಿಗೂ ಯಾವುದೇ ಲೋಪವಾಗದಂತೆ ಕಾಮಗಾರಿಗಳನ್ನು ನಡೆಸುತ್ತಿದ್ದಾರೆ. ಉತ್ತಮ ಗುಣಮಟ್ಟದ ರಸ್ತೆ ಮಾಡಿಕೊಡಲಿದ್ದಾರೆ. ಹಸಿರು ರಾಮನಗರ, ಪ್ಲಾಸ್ಟಿಕ್ ಮುಕ್ತ ಹಾಗೂ ಸ್ವಚ್ಛ ರಾಮನಗರ ನಿರ್ಮಾಣಕ್ಕೆ ಚಾಲನೆ ನೀಡಲಾಗಿದ್ದು, ಸಾರ್ವಜನಿಕರು ಸಹಕರಿಸುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ನಗರಸಭೆ ನಾಮಿನಿ ಸದಸ್ಯ ಗೋವಿಂದರಾಜು, ಟಿಎಪಿಸಿಎಂಎಸ್ ಅಧ್ಯಕ್ಷ ದೊಡ್ಡಿ ಸುರೇಶ್, ಅಧಿಕಾರಿಗಳಾದ ವಿಶ್ವನಾಥ್, ನಿರ್ಮಲ, ಗುತ್ತಿಗೆದಾರ ವಾಸು, ಸ್ಥಳೀಯ ಮುಖಂಡರು ಇದ್ದರು.

ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನೂತನ ಪದಾಧಿಕಾರಿಗಳ ಪದಗ್ರಹಣ

ಸೂರ್ಯಪ್ರಗತಿನ್ಯೂಸ್.ಕಾಂ

ರಾಮನಗರ :ಒಗ್ಗಟ್ಟಿದ್ದರೆ ಮಾತ್ರ ಒಂದು ಸಂಘಟನೆ ಯಶಸ್ವಿಯಾಗಲು ಸಾಧ್ಯವಿದ್ದು, ಅವಿರೋಧ ಆಯ್ಕೆಗಳು ಒಗ್ಗಟ್ಟಿನ ಪ್ರತೀಕವಾಗಿದೆ. ಆಂತರಿಕ ಒಗ್ಗಟ್ಟು ಮತ್ತು ಸಂಘಟನಾ ಶಕ್ತಿಯಿಂದ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಮತ್ತಷ್ಟು ಪ್ರಗತಿ ಕಾಣಲು ಸಾಧ್ಯ ಎಂದು ವಿಧಾನ ಪರಿಷತ್ ಸದಸ್ಯ ರಾಮೋಜಿಗೌಡ ಅಭಿಪ್ರಾಯಪಟ್ಟರು.

ನಗರದ ಕೃಷ್ಣಸ್ಮೃತಿ ಕಲ್ಯಾಣ ಮಂಟಪದಲ್ಲಿ ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಕ್ಕೆ ನೂತನವಾಗಿ ಆಯ್ಕೆಯಾಗಿರುವ ಪದಾಧಿಕಾರಿಗಳ ಪದಗ್ರಹಣ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಬೆಂಗಳೂರು ದಕ್ಷಿಣ, ಉತ್ತರ ಹಾಗೂ ಗ್ರಾಮಾಂತರ ಜಿಲ್ಲೆಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಕ್ಕೆ ಅಧ್ಯಕ್ಷರು ಅವಿರೋಧವಾಗಿ ಆಯ್ಕೆಯಾಗಿರುವುದು ರಾಜ್ಯಕ್ಕೆ ಮಾದರಿಯಾಗಿದೆ. ಈ ಅವಿರೋಧ ಆಯ್ಕೆ ಶಿಕ್ಷಕರ ಒಗ್ಗಟ್ಟನ್ನು ತೋರಿಸುವ ಜತೆಗೆ ಸರ್ಕಾರಕ್ಕೆ ಒಂದು ಸಂದೇಶವನ್ನು ತಲುಪಿಸಿದೆ ಎಂದರು.

ನಿಮ್ಮೆಲ್ಲರ ಆಶೀರ್ವಾದದಿಂದ ವಿಧಾನ ಪರಿಷತ್ತಿಗೆ ಆಯ್ಕೆಯಾಗಿರುವ ನಾನು ನಿಮ್ಮ ಋಣ ತೀರಿಸುವ ಕೆಲಸ ಮಾಡುತ್ತಿರುವೆ. ಸದನದಲ್ಲಿ ಪ್ರಾಥಮಿಕ ಶಿಕ್ಷಕರ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ಕೇಳುವ ಮೂಲಕ ಪರಿಹಾರ ಒದಗಿಸುವ ಪ್ರಯತ್ನ ಮಾಡುತ್ತಿದ್ದೇನೆ. ನಿಮ್ಮೆಲ್ಲರ ಕುಟುಂಬದ ಸದಸ್ಯನಂತೆ ನಿಮ್ಮ ಕಷ್ಟಗಳನ್ನು ಪರಿಹರಿಸಲು ಶ್ರಮಿಸುತ್ತಿದ್ದೇನೆ ಎಂದು ಹೇಳಿದರು. ಬೆಂಗಳೂರು ನಗರ ಜಿಲ್ಲೆಗೆ ಸೀಮಿತವಾಗಿರುವ ಶಿಕ್ಷಕರ ಪತ್ತಿನ ಸಹಕಾರ ಸಂಘವನ್ನು ಬೆಂ. ದಕ್ಷಿಣ ಹಾಗೂ ಗ್ರಾಮಾಂತರ ಜಿಲ್ಲೆಗೂ ವಿಸ್ತರಿಸಲಾಗುವುದು. ಹಣದ ಅವಶ್ಯಕತೆ ಇರುವ ಶಿಕ್ಷಕರು ಹೆಚ್ಚಿನ ಬಡ್ಡಿಗೆ ಖಾಸಗಿಯವರ ಬಳಿ ಹಣ ಪಡೆಯುವ ಬದಲು ನಮ್ಮದೇ ಸಹಕಾರ ಸಂಘವನ್ನು ಸದುಪಯೋಗ ಪಡೆಯಬಹುದು ಎಂದು ಮನವಿ ಮಾಡಿದರು.

ಕರ್ನಾಟಕ ರಾಜ್ಯ ಸರ್ಕಾರಿ/ಅರೆ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಂಘದಿಂದ ಬೆಂಗಳೂರಿನಲ್ಲಿ ಅಪಾರ್ಟ್ಮೆಂಟ್ ನಿರ್ಮಾಣ ಮಾಡುತ್ತಿದ್ದೇವೆ. ಚನ್ನಪಟ್ಟಣದಲ್ಲಿ ಅತ್ಯುತ್ತಮ ಬಡಾವಣೆ ನಿರ್ಮಾಣ ಮಾಡುತ್ತಿದ್ದೇವೆ. ಪ್ರತಿ ಚದರಡಿಗೆ 5 ಸಾವಿರ ರೂ. ಬೆಲೆ ಬಾಳುವ ನಿವೇಶನಗಳನ್ನು 4,100 ರೂ. ಗಳಿಗೆ ನೀಡಲಾಗುತ್ತಿದೆ. ಶಿಕ್ಷಕ ವೃಂದ ಇದರ ಪ್ರಯೋಜನ ಪಡೆಯಬೇಕು ಎಂದರು.

ನಾವು ಮಕ್ಕಳ ಋಣದಲ್ಲಿ ಬದುಕುತ್ತಿದ್ದೇವೆ. ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸುವ ಶಿಕ್ಷಕರಿಗೆ ಎಂತದ್ದೇ ತೊಂದರೆ ಎದುರಾದರೂ ನಾವು ನಿಮ್ಮ ಜತೆಗೆ ಇರುತ್ತೇವೆ. ದಿನದ 24 ಗಂಟೆ ಕರೆ ಮಾಡಿದರೂ ನಾನು ಕರೆ ಸ್ವೀಕರಿಸುತ್ತೇನೆ. ನಿಮ್ಮ ಸೇವೆಗೆ ನಾನು ಸದಾ ಸಿದ್ಧನಿದ್ದೇನೆ ಎಂದು ಆಶ್ವಾಸನೆ ನೀಡಿದರು.

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷ ಚಂದ್ರಶೇಖರ್ ನುಗ್ಗಲಿ ಮಾತನಾಡಿ, ಶಿಕ್ಷಕರ ದಿನಾಚರಣೆಗೂ ಮುನ್ನ ಪದವಿ ಮುಗಿಸಿರುವ 56 ಸಾವಿರ ಮಂದಿ ಶಿಕ್ಷಕರಿಗೆ ಪದೋನ್ನತಿ ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಪ್ರತಿ ನಿತ್ಯ ಶಾಲಾ ಮಕ್ಕಳಿಗೆ ನೀಡುವ ಮೊಟ್ಟೆದರ ಏರಿಕೆಯಾದರೆ ಶಿಕ್ಷಕರು ತಮ್ಮ ಜೇಬಿನಿಂದ ಹಾಕಬೇಕಾದ ದುಃಸ್ಥಿತಿ ಇದೆ. ಇದನ್ನು ತಪ್ಪಿಸಲು ಮೊಟ್ಟೆ ದರವನ್ನು ಹೆಚ್ಚಿಸಲು ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ದರ ಏರಿಕೆ ಆದೇಶ ಶೀಘ್ರ ಹೊರ ಬೀಳಲಿದೆ. ಎಲ್‌ಕೆಜಿ ಇಂದ ಪಿಯುಸಿವರೆಗಿನ ಎಲ್ಲಾ ವಿದ್ಯಾರ್ಥಿಗಳಿಗೆ ಇನ್ನೆರಡು ತಿಂಗಳಲ್ಲಿ ಉಚಿತ ನೋಟ್‌ಬುಕ್ ವಿತರಣೆ ಮಾಡಲಾಗುವುದು ಎಂದರು.

ರಾಜ್ಯದ ಎಲ್ಲಾ ಶಾಲೆಗಳಿಗೂ ಉಚಿತ ಇಂಟರ್‌ನೆಟ್ ಕಲ್ಪಿಸಲು ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಗಿದೆ. ಆಫ್‌ಲೈನ್ ಮುಲಕ ಕ್ಯಾಮ್ಸ್ ಹಾಜರಾತಿಗೆ ಮನವಿ ಮಾಡಲಾಗಿದೆ. ಶಿಕ್ಷಕರನ್ನು ಸಂಘಟಿಸಲು ಹಾಗೂ ಶಿಕ್ಷಕರ ಸಮಸ್ಯೆಗಳನ್ನು ಬಗೆಹರಿಸಲು ರಾಜ್ಯ ಹಾಗೂ ಜಿಲ್ಲಾ ಮಟ್ಟದ ಸಂಘಗಳ ಪದಾಧಿಕಾರಿಗಳಿಗೆ ಶಾಶ್ವತ ಒಒಡಿ ವ್ಯವಸ್ಥೆ ಕಲ್ಪಿಸಲು ಮನವಿ ಸಲ್ಲಿಸಲಾಗಿದೆ ಎಂದರು.

ತಿಂಗಳ ಎರಡನೇ ಮತ್ತು ನಾಲ್ಕನೇ ಶನಿವಾರಗಳಂದು ಸರ್ಕಾರಿ ನೌಕರರಿಗೆ ನೀಡಲಾಗುತ್ತಿರುವ ರಜೆಯನ್ನು ಶಿಕ್ಷಕರಿಗೂ ವಿಸ್ತರಿಸಬೇಕು. ಇದಕ್ಕೆ ಇಲಾಖೆ ಜಂಟಿ ಕಾರ್ಯದರ್ಶಿ ರಶ್ಮಿ ಮಹೇಶ್ ಅವರೂ ಸಕಾರಾತ್ಮಕ ಮನೋಭಾವ ಹೊಂದಿದ್ದಾರೆ. ತಮಿಳುನಾಡು ಸೇರಿದಂತೆ ಇನ್ನಿತರೆ ರಾಜ್ಯಗಳಲ್ಲಿ ವಾರದಲ್ಲಿ ಐದು ದಿನಗಳು ಮಾತ್ರವೇ ತರಗತಿಗಳು ನಡೆಯುತ್ತಿವೆ. ನಮ್ಮ ರಾಜ್ಯದಲ್ಲೂ ಇದೇ ವ್ಯವಸ್ಥೆಯನ್ನು ಜಾರಿಗೆ ತರಬೇಕು ಎಂದು ಆಗ್ರಹಿಸಿದರು.

ನಿಕಟಪೂರ್ವ ಅಧ್ಯಕ್ಷ ರಮೇಶ್ ಅವರು ನೂತನ ಅಧ್ಯಕ್ಷರಾದ ಹೆಚ್.ಹನುಮಯ್ಯ ಅವರಿಗೆ ಅಧಿಕಾರ ಹಸ್ತಾಂತರ ಮಾಡಿದರು. ಈ ಸಂದರ್ಭದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಚೇತನ್, ಮೈಸೂರು ಜಿಲ್ಲಾಧ್ಯಕ್ಷ ಶಶಿ, ಬಿಇಒ ಸೋಮಲಿಂಗಯ್ಯ, ರಾಮಲಿಂಗಯ್ಯ, ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಬಸವರಾಜ್, ರಾಮನಗರ ತಾಲ್ಲೂಕು ಅಧ್ಯಕ್ಷ ಬಸವೇಗೌಡ ಮಾಗಡಿ ತಾಲ್ಲೂಕು ಅಧ್ಯಕ್ಷ ಮಲ್ಲಿಕಾರ್ಜುನ ಸ್ವಾಮಿ, ಚನ್ನಪಟ್ಟಣ ತಾಲ್ಲೂಕು ಅಧ್ಯಕ್ಷ ಎಂ.ಕೃಷ್ಣ, ಕನಕಪುರ ತಾಲ್ಲೂಕು ಅಧ್ಯಕ್ಷ ಹೆಚ್.ವಿ.ಚಂದ್ರಶೇಖರ್, ಸಂಘಟನೆಯ ಪ್ರಮುಖರಾದ ರಾಜಶೇಖರ್, ಜಯರಾಮ್, ಬಸವರಾಜ್, ವಿಷಕಂಠಯ್ಯ, ರಂಗಸ್ವಾಮಯ್ಯ, ಮೂರ್ತಿ, ಮಂಜುಳಾ, ಯೋಗಿತ, ಕವಿತ, ವಾಸುದೇವ ಗಿರೀಶ್, ಮಂಜುನಾಥ್, ಪ್ರಭಾಕರ್ ಸೇರಿದಂತೆ ಹಲವರು ಇದ್ದರು.

ಅಂಜುಮನ್ ಇಸ್ಲಾಮಿಯ ವಕ್ಪ್ ಸಂಸ್ಥೆಗೆ 15 ಮಂದಿ ನಿರ್ದೇಶಕರು ಆಯ್ಕೆ

ಸೂರ್ಯಪ್ರಗತಿನ್ಯೂಸ್.ಕಾಂ

ಕೊಳ್ಳೇಗಾಲ ಪಟ್ಟಣದ ಅಂಜುಮನ್ ಇಸ್ಲಾಮಿಯ್ ವಕ್ಪ್ ಸಂಸ್ಥೆಯ 15 ಮಂದಿ ನಿರ್ದೇಶಕರು ಆಯ್ಕೆಯಾಗಿದ್ದಾರೆಂದು ಚುನಾವಣಾಧಿಕಾರಿ ಹಾಗೂ ಉದ್ಯೋಗ ಅಧಿಕಾರಿ ಮಹಮ್ಮದ್ ಅಕ್ಬರ್ ಅವರು ಘೋಷಣೆ ಮಾಡಿದರು.

ಪಟ್ಟಣದ ಎಸ್.ವಿ.ಕೆ ಕಾಲೇಜು ಆವರಣದಲ್ಲಿ ನಡೆದ ಚುನಾವಣೆಯಲ್ಲಿ 9 ಮಸೀದಿಗಳಲ್ಲಿ ಒಟ್ಟು 1870 ಮತಗಳ ಪೈಕಿ 1680 ಚಲಾವಣೆಗೊಂಡಿದ್ದು, ಈ ಚುನಾವಣೆಯಲ್ಲಿ ಸ್ಪರ್ಧಿಸಿದ್ದ 35 ಮಂದಿ ಪೈಕಿ 14 ಮಂದಿ ಹಾಗೂ ಅವಿರೋಧವಾಗಿ 1 ನಿರ್ದೇಶಕರು ಆಯ್ಕೆಯಾಗಿದ್ದಾರೆ. ಚುನಾವಣೆಯಲ್ಲಿ

ಅವಿರೋಧವಾಗಿ ರಾಜೀವ್ ನಗರ ಮಸೀದ್ ಎ ಸಾದ್ ಸಜ್ಜಾದ್ ಪಾಷ ಅವರು ಆಯ್ಕೆಯಾಗಿದ್ದಾರೆ. ಇನ್ನುಳಿದಂತೆ ಚುನಾವಣೆಯಲ್ಲಿ ಜಾಮೀಯಾ ಮಸೀದಿ(ದೊಡ್ಡ ಮಸೀದಿ) ಮೊಹಮದ್ ಮುಹೀಬುಲ್ಲಾ ಷರೀಫ್, ಅಯಾಜ್ ಪಾಷ, ಮೊಹಮ್ಮದ್ ಅತೀಖ್ ಪಾಷ, ಖುದ್ದುಸೀಯಾ ಮಸೀದಿ(ಚಿಕ್ಕ ಮಸೀದಿ) ಅಯೂಬ್ ಖಾನ್, ವಾಸೀಮ್ ಅಹಮದ್, ಅಬ್ದುಲ್ ಜಬೀವುಲ್ಲಾ, ಈದ್ಗಾ ಮೊಹಲ್ಲಾ ಅಮೀನಾ ಮಸೀದಿಯ ಹಬೀಬ್ ಪಾಷ, ಅಬ್ದುಲ್ ಸಾದೀಕ್, ವಿದ್ಯಾನಗರ ಫರೀದಾ ಮಸೀದಿ ಫಸಿವುಲ್ಲಾ ಖಾನ್, ರಾಮಸ್ವಾಮಿ ಲೇಔಟ್ ಮಹಬೂಬಿಯಾ ಮಸೀದಿ ಅಬ್ದುಲ್ ಖಾದರ್, ನೂರ್ ಮೊಹಲ್ಲಾ ಮಹಬೂಬಿಯಾ ಮಸೀದಿ ಜಮೀಲ್ ಪಾಷ ಹಾಗೂ ಮಹಮ್ಮದ್ ಮತೀನ್, ಮುಡಿಗುಂಡ ಅಶ್ರಫ್ ಮಸೀದಿ ಎ.ಆಲ್ತಾಫ್, ಆಶ್ರಯ ಬಡಾವಣೆಯ ಮಸೀದಿ ವಸೀಂ ಪಾಷ ರವರುಗಳು ಅಮೋಘವಾಗಿ ಜಯಗಳಿಸಿದ್ದಾರೆಂದು ಚುನಾವಣಾಧಿಕಾರಿ ಘೋಷಣೆ ಮಾಡಿದರು.

ಲಾಟರಿ ಮೂಲಕ ಗೆಲುವು: ಮುಡಿಗುಂಡ ಅಶ್ರಫ್ ಮಸೀದಿಯಿಂದ ಸ್ಪರ್ಧಿಸಿದ್ದ ಅಲ್ತಾಫ್ ಹಾಗೂ ಸೋಯೇಬ್ ಅಹ್ಮದ್ ರವರು ತಲಾ 20 ಮತಗಳು ಪಡೆದಿದ್ದು, ಈ ಪೈಕಿ ಅಲ್ತಾಫ್ ರವರು ಲಾಟರಿ ಮೂಲಕ ಜಯಗಳಿಸಿದ್ದಾರೆ. ಜಯಗಳಿಸಿದ್ದ ಎಲ್ಲಾ ನಿರ್ದೇಶಕರುಗಳಿಗೆ ಪ್ರಮಾಣ ಪತ್ರವನ್ನು ಚುನಾವಣಾಧಿಕಾರಿ ಸಲ್ಲಿಸಿದರು. ನೂತನ ನಿರ್ದೇಶಕರುಗಳಿಗೆ ಹಾರ ಹಾಕುವ ಮೂಲಕ ಬೆಂಬಲಿಗರು ಸಂಭ್ರಮ ವ್ಯಕ್ತಪಡಿಸಿದರು.

ನೂರು ವರ್ಷ ಪೂರೈಸಿರುವ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಯಾಕೆ ನೋಂದಣಿಯಾಗಿಲ್ಲ? ಸಭಿಕರಿಂದ ಪ್ರಶ್ನೆ

ಸೂರ್ಯಪ್ರಗತಿನ್ಯೂಸ್.ಕಾಂ

ಮಧುಗಿರಿ: ನೂರು ವರ್ಷ ಪೂರೈಸಿರುವ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಯಾಕೆ ನೋಂದಣಿಯಾಗಿಲ್ಲ? ಎಂಬ ಪ್ರಶ್ನೆ ಸಭಿಕರಿಂದ ಆರ್.ಎಸ್.ಎಸ್ ಪ್ರಚಾರ ಪ್ರಮುಖ್ ರತ್ತ ತೂರಿ ಬಂದಿತು.

ಪಟ್ಟಣದ ಕನ್ನಡ ಭವನದಲ್ಲಿ ಭಾನುವಾರ ಆರ್.ಎಸ್.ಎಸ್ ಮಧುಗಿರಿ ಸಂಘಟನಾ ಜಿಲ್ಲಾ ಘಟಕದ ವತಿಯಿಂದ 'ಪ್ರಮುಖ ನಾಗರಿಕ ಗೋಷ್ಠಿ'ಯನ್ನು ಆಯೋಜಿಸಲಾಗಿತ್ತು. ಗೋಷ್ಠಿಯಲ್ಲಿ ವಿಚಾರ ಮಂಡಿಸಿದ ಆರ್.ಎಸ್.ಎಸ್.ದಕ್ಷಿಣ ಕರ್ನಾಟಕ ವಿಭಾಗದ ಪ್ರಚಾರ ಪ್ರಮುಖರಾದ ಕಾಸರಗೋಡಿನ ರಾಜೇಶ್ ಪದ್ಮಾರ್ ಅವರಿಗೆ ಸಭಿಕರಿಂದ ಹಲವು ಪ್ರಶ್ನೆಗಳು ಎದುರಾದವು.

ರಾಷ್ಟ್ರ ವ್ಯಾಪಿ ಹರಡಿರುವ, ಶತಮಾನ ಪೂರೈಸಿರುವ ಸಂಘಟನೆಯೊಂದು ಇಲ್ಲಿಯವರೆಗೂ ನೋಂದಣಿಯಾಗಿಲ್ಲ ಯಾಕೆ? ಎಂಬ ಪ್ರಶ್ನೆ ಕೇಳಿ ಬಂತು. ಈ ಪ್ರಶ್ನೆಗೆ ಉತ್ತರಿಸಿದ ರಾಜೇಶ್, ಸಂಘದ ಹೆಸರೇ ರಾಷ್ಟ್ರೀಯ ಸ್ವಯಂಸೇವಕ ಸಂಘ. ಇದನ್ನು ಸೇರಲು ಯಾರನ್ನೂ ಒತ್ತಾಯಿಸುವುದಿಲ್ಲ. ಸ್ವಪ್ರೇರಣೆಯಿಂದ ಸಂಘದ ಸದಸ್ಯರಾಗಬಹುದು, ನಂತರ ಕಾರ್ಯಕರ್ತರಾಗಿ ಬೆಳೆಯಬಹುದು. ಸಂಘ ಸೇರಲು ಪ್ರವೇಶ ಶುಲ್ಕವಿಲ್ಲ, ಹೀಗಾಗಿ ನೋಂದಾಯಿಸಿಕೊಳ್ಳುವ ಅಗತ್ಯವಿಲ್ಲ. ಜೊತೆಗೆ ಸಂಘಕ್ಕೆ ಯಾವುದೇ ಸಾಂಸ್ಥಿಕ ಕಟ್ಟಡ, ಸಂಸ್ಥೆಗಳಾಗಲಿ ಇಲ್ಲ. ಸಂಘಕ್ಕೆ ಪೂರಕವಾಗಿ ಕೆಲಸ ಮಾಡುವ ಹಲವಾರು ಸಂಘಟನೆಗಳು ನೋಂದಣಿಯಾಗಿವೆ. ಏಕೆಂದರೆ ಅವು ಆರ್ಥಿಕ ವ್ಯವಹಾರ ನಡೆಸುತ್ತವೆ. ಆರ್.ಎಸ್.ಎಸ್. ಒಂದು ಸಾಮಾಜಿಕ ಸಂಘಟನೆಯಾಗಿದೆ ಎಂದರು.

ಕಾರ್ಯಕರ್ತರಾಗಿ ಸಂಘದಲ್ಲಿ ಬೆಳೆಯಬಹುದು ಎನ್ನುವುದಾದರೆ ಇಲ್ಲಿಯವರೆಗೂ ಕೇವಲ ಒಂದು ಸಮುದಾಯದವರು ಮಾತ್ರ ರಾಷ್ಟ್ರೀಯ ಸಂಚಾಲಕರಾಗಿದ್ದಾರೆ. ಉಳಿದವರಿಗೆ ಅವಕಾಶ ಲಭಿಸುವುದು ಯಾವಾಗ ಎಂಬ ಪ್ರಶ್ನೆ ಕೇಳಲಾಯಿತು. ಇದಕ್ಕೆ ಉತ್ತರಿಸಿದವರು ಮುಂದಿನ ದಿನಗಳಲ್ಲಿ ಎಲ್ಲರಿಗೂ ಅವಕಾಶ ಲಭಿಸಲಿದೆ ಎಂದರು.

ಸಾಮಾಜಿಕ ಸಂಘಟನೆಯಾಗಿರುವ ಸಂಘವು ಶತಮಾನೋತ್ಸವದ ಸಂದರ್ಭದಲ್ಲಿ ಕಾರ್ಯಕರ್ತರಿಂದ ಪಂಚ ಪರಿವರ್ತನೆಯನ್ನು ನಿರೀಕ್ಷಿಸುತ್ತದೆ. ಅವುಗಳೆಂದರೆ ವ್ಯಕ್ತಿಯನ್ನು ಜಾತಿ ಕಣ್ಣಿನಿಂದ ನೋಡಬಾರದು.ಪಂಕ್ತಿಬೇಧ ತ್ಯಜಿಸಿ ಸಾಮರಸ್ಯ ಸಾಧಿಸುವುದು. ಪರಿಸರ ಸಂರಕ್ಷಣೆಗೆ ಒತ್ತು ನೀಡುವುದು.ಸ್ವದೇಶಿ ಜೀವನ ಶೈಲಿ ಅಳವಡಿಸಿಕೊಳ್ಳುವುದು. ಮಕ್ಕಳಿಗೆ ಕುಟುಂಬ ಹಂತದಲ್ಲಿಯೇ ನಾಗರಿಕ ಶಿಷ್ಟಾಚಾರ ರೂಡಿಸುವುದು.

ಸಾಮಾಜಿಕ ಪರಿವರ್ತನೆಯಲ್ಲಿ ಸಂಘದ ಪಾತ್ರ ಪ್ರಮುಖವಾಗಿದ್ದು, ಹಿಂದೂ ಧರ್ಮೀಯರ ಸಂಖ್ಯಾಬಲ ದೇಶದಲ್ಲಿ ಕ್ಷೀಣಿಸುತ್ತಿರುವುದರಿಂದ, ಪ್ರತಿಯೊಬ್ಬರೂ ತಮ್ಮ ಆರ್ಥಿಕ ಶಕ್ತಿಯಾನುಸಾರ ಮಕ್ಕಳನ್ನು ಪಡೆಯಬೇಕು.ಹಿಂದೂಗಳು ಮೂರು ಮಕ್ಕಳನ್ನು ಪಡೆಯುವುದಕ್ಕೆ ಸಂಘ ಕರೆ ಕೊಟ್ಟಿದೆ ಎಂದರು.ಜಿಲ್ಲಾ ಸಂಚಾಲಕ ಜಯಪ್ರಕಾಶ್, ತಾಲೂಕು ಸಂಚಾಲಕ ಬಾಲಕೃಷ್ಣ, ದೀಪಾ ಮಹೇಶ್, ಶಾರದಮ್ಮ, ಕೀರ್ತಿ, ಶೈಲಜಾ, ಭವ್ಯ, ಮೋಹನ್ ರಾಜ್ ಹಾಜರಿದ್ದರು.

ತುಮಕೂರು ಜಿಲ್ಲೆಯಲ್ಲಿ ಟೊಯೋಟಾ ಕಿರ್ಲೋಸ್ಕರ್ ಮೋಟಾರ್ ವತಿಯಿಂದ 6 ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಶಂಕುಸ್ಥಾಪನೆ

ಸೂರ್ಯಪ್ರಗತಿನ್ಯೂಸ್.ಕಾಂ

ರಾಮನಗರ: ಜನರ ದೈನಂದಿನ ಜೀವನವನ್ನು ಸುಧಾರಿಸಿದಾಗ ಅಭಿವೃದ್ಧಿ ಅರ್ಥಪೂರ್ಣವಾಗುತ್ತದೆ. ಶುದ್ಧ ಕುಡಿಯುವ ನೀರಿನ ಸೌಲಭ್ಯ ಕೇವಲ ಮೂಲಸೌಕರ್ಯದ ಅಗತ್ಯವಲ್ಲ, ಆದರೆ ಆರೋಗ್ಯ, ಶಿಕ್ಷಣ ಮತ್ತು ಇಡೀ ಸಮುದಾಯಗಳ ಯೋಗಕ್ಷೇಮದ ಮೇಲೆ ಪರಿಣಾಮ ಬೀರುವ ಅವಶ್ಯಕತೆಯಾಗಿದೆ. ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದರು.

ತುಮಕೂರು ಜಿಲ್ಲೆಯಲ್ಲಿ ಬಿಡದಿಯ ಟೊಯೋಟಾ ಕಿರ್ಲೋಸ್ಕರ್ ಮೋಟಾರ್‌ನ ಸಿಎಸ್‌ಆರ್ ನಿಧಿಯಡಿ 6 ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು ಟೊಯೋಟಾ ಕಿರ್ಲೋಸ್ಕರ್ ಮೋಟಾರ್‌ನ ಈ ಉಪಕ್ರಮವು ತುಮಕೂರಿನ ಹಳ್ಳಿಗಳಾದ್ಯಂತ ಸಾವಿರಾರು ನಿವಾಸಿಗಳಿಗೆ ಪ್ರಯೋಜನವನ್ನು ನೀಡುತ್ತದೆ ಮತ್ತು ಈ ಪ್ರದೇಶಕ್ಕೆ ದೀರ್ಘಕಾಲೀನ ಮೌಲ್ಯವನ್ನು ಸೃಷ್ಟಿಸುತ್ತದೆ. ಸಮುದಾಯ ಅಭಿವೃದ್ಧಿಗೆ ಮತ್ತು ಗ್ರಾಮೀಣ ಭಾರತದ ಆಕಾಂಕ್ಷೆಗಳನ್ನು ಬೆಂಬಲಿಸುವ ಪ್ರಯತ್ನಗಳಿಗೆ ಕಂಪನಿಯನ್ನು ನಾನು ಶ್ಲಾಘಿಸುತ್ತೇನೆ. ಎಂದರು.

ಪ್ರತಿಯೊಂದು ಸಮುದಾಯದ ಆರೋಗ್ಯ ಮತ್ತು ಯೋಗಕ್ಷೇಮಕ್ಕೆ ಸುರಕ್ಷಿತ ಕುಡಿಯುವ ನೀರು ಅತ್ಯಗತ್ಯ, ಆದರೆ ಕರ್ನಾಟಕದ ಹಲವಾರು ಗ್ರಾಮೀಣ ಪ್ರದೇಶಗಳಲ್ಲಿ ಶುದ್ಧ ಕುಡಿಯುವ ನೀರು ಒದಗಿಸುವುದು ಒಂದು ಸವಾಲಾಗಿ ಉಳಿದಿದೆ. ಈ ಅಗತ್ಯವನ್ನು ಪೂರೈಸಲು, ಬೆಳಿಗೆರೆ, ಕಂಬೇರಹಟ್ಟಿ, ಹೊಸಹಟ್ಟಿ, ಮುದ್ದಪಾಳ್ಯ, ಜುಂಜಪ್ಪನಹಟ್ಟಿ ಮತ್ತು ಸೋಮಲಾಪುರ ಸೇರಿದಂತೆ ಆರು ಸ್ಥಳಗಳಲ್ಲಿ ಗಂಟೆಗೆ 500 ಲೀಟರ್ ಸಾಮರ್ಥ್ಯದ ನೀರು ಶುದ್ಧೀಕರಣ ಘಟಕಗಳನ್ನು ಸ್ಥಾಪಿಸಲಿದೆ. ಈ ಯೋಜನೆಯು 29 ಹಳ್ಳಿಗಳಲ್ಲಿ ವಾರ್ಷಿಕವಾಗಿ 9200 ಗ್ರಾಮಸ್ಥರಿಗೆ ಪ್ರಯೋಜನವನ್ನು ನೀಡುವ ನಿರೀಕ್ಷೆಯಿದೆ ಎಂದು ಹೇಳಿದರು.

ಟೊಯೋಟಾ ಕಿರ್ಲೋಸ್ಕರ್ ಮೋಟಾರ್‌ನ ಕಾರ್ಪೊರೇಟ್ ವ್ಯವಹಾರಗಳ ದೇಶದ ಮುಖ್ಯಸ್ಥ ಮತ್ತು ಕಾರ್ಯನಿರ್ವಾಹಕ ಉಪಾಧ್ಯಕ್ಷ ವಿಕ್ರಮ್ ಗುಲಾಟಿ ಮಾತನಾಡಿ "ಶುದ್ಧ ಕುಡಿಯುವ ನೀರು ಎಂದಿಗೂ ಸವಲತ್ತು ಆಗಬಾರದು, ಅದು ಪ್ರತಿ ಕುಟುಂಬಕ್ಕೂ ಅರ್ಹವಾದ ಮೂಲಭೂತ ಅವಶ್ಯಕತೆಯಾಗಿದೆ. ಸುರಕ್ಷಿತ ನೀರಿನ ಪ್ರವೇಶವು ಇಡೀ ಸಮುದಾಯಗಳ ಆರೋಗ್ಯ ಮತ್ತು ದೈನಂದಿನ ಜೀವನದ ಮೇಲೆ ಹೇಗೆ ಸಕಾರಾತ್ಮಕ ಪ್ರಭಾವ ಬೀರುತ್ತದೆ ಎಂಬುದನ್ನು ನಾವು ನೋಡಿದ್ದೇವೆ. ತುಮಕೂರಿನಲ್ಲಿ ಸ್ಥಾಪಿಸಲಾಗುತ್ತಿರುವ ಆರ್‌ಒ ಘಟಕಗಳು ಅವರು ಸೇವೆ ಸಲ್ಲಿಸುವ ಹಳ್ಳಿಗಳಿಗೆ ಶಾಶ್ವತ ಮೌಲ್ಯವನ್ನು ಸೃಷ್ಟಿಸುವ ಮತ್ತು ಭವಿಷ್ಯದ ಪೀಳಿಗೆಯ ಯೋಗಕ್ಷೇಮವನ್ನು ಬೆಂಬಲಿಸುವ ಉದ್ದೇಶವನ್ನು ಹೊಂದಿವೆ. ಟೊಯೋಟಾ ಕಿರ್ಲೋಸ್ಕರ್ ಮೋಟಾರ್ ನಲ್ಲಿ, ನಿಜವಾದ ಸಮುದಾಯದ ಅಗತ್ಯಗಳನ್ನು ಪರಿಹರಿಸುವ ಮತ್ತು ಅದು ಹೆಚ್ಚು ಮುಖ್ಯವಾದ ಸ್ಥಳದಲ್ಲಿ ಅರ್ಥಪೂರ್ಣ ವ್ಯತ್ಯಾಸವನ್ನುಂಟು ಮಾಡುವ ಉಪಕ್ರಮಗಳನ್ನು ಕೈಗೊಳ್ಳಲು ನಾವು ಬದ್ಧರಾಗಿದ್ದೇವೆ ಎಂದು ಹೇಳೀದರು.

ಈ ಸಂದರ್ಭದಲ್ಲಿ ಟೊಯೋಟಾ ಕಿರ್ಲೋಸ್ಕರ್ ಮೋಟಾರ್‌ನ ಉಪಾಧ್ಯಕ್ಷ ರಮೇಶ್ ರಾವ್ ಸೇರಿದಂತೆ ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.

ಸ್ವಿಫ್ಟ್ ಸಿಟಿ ಭೂಸ್ವಾಧೀನ ವಿರೋಧಿ ಹೋರಾಟಕ್ಕೆ ಆರ್. ಅಶೋಕ್ ಬೆಂಬಲ

ಸೂರ್ಯಪ್ರಗತಿನ್ಯೂಸ್.ಕಾಂ

ಆನೇಕಲ್ : ಬೆಂಗಳೂರು ಹೊರವಲಯದ ಆನೇಕಲ್ ತಾಲೂಕಿನ ಸರ್ಜಾಪುರ ಹೋಬಳಿಯಲ್ಲಿ ಸ್ವಿಫ್ಟ್ ಸಿಟಿ ಯೋಜನೆಗಾಗಿ ಸುಮಾರು 2,450 ಎಕರೆ ಭೂಸ್ವಾಧೀನ ಪ್ರಕ್ರಿಯೆ ವಿರೋಧಿಸಿ ರೈತರು ಕಳೆದ 330 ದಿನಗಳಿಂದ ನಡೆಸುತ್ತಿರುವ ಅಹೋರಾತ್ರಿ ಧರಣಿಗೆ ಇದೀಗ ರಾಜಕೀಯ ಬೆಂಬಲವೂ ದೊರೆತಿದೆ. ವಿರೋಧ ಪಕ್ಷದ ನಾಯಕ ಆರ್. ಅಶೋಕ್, ಸಂಸದ ಡಾ. ಸಿ.ಎನ್. ಮಂಜುನಾಥ್, ಬೊಮ್ಮನಹಳ್ಳಿ ಶಾಸಕ ಸತೀಶ್ ರೆಡ್ಡಿ ಹಾಗೂ ಎಂಎಲ್‌ಸಿ ಗೋಪಿನಾಥ್ ರೆಡ್ಡಿ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ರೈತರೊಂದಿಗೆ ಸಮಾಲೋಚನೆ ನಡೆಸಿದರು.

ರೈತರ ಹೋರಾಟಕ್ಕೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದ ಆರ್. ಅಶೋಕ್, ರಾಜ್ಯ ಸರ್ಕಾರದ ಭೂಸ್ವಾಧೀನ ನೀತಿಯನ್ನು ತೀವ್ರವಾಗಿ ಟೀಕಿಸಿದರು. "ಅಗತ್ಯವಿದ್ದರೆ ನಾನೇ ಬಂದು ಹೋರಾಟದ ನೇತೃತ್ವ ವಹಿಸುತ್ತೇನೆ. ಮುಂದಿನ ವಿಧಾನಸಭೆ ಅಧಿವೇಶನದಲ್ಲಿ ರೈತರ ಧ್ವನಿಯನ್ನು ಪ್ರಬಲವಾಗಿ ಎತ್ತುತ್ತೇನೆ. ತಾಲ್ಲೂಕು ಕಚೇರಿಗೆ ಮುತ್ತಿಗೆ ಹಾಕುವ ಹೋರಾಟವನ್ನೂ ನಡೆಸಿಹೋಣ. ಪೊಲೀಸರ ಬೆದರಿಕೆಗೆ ರೈತರು ಹೆದರಬಾರದು" ಎಂದು ಹೇಳಿದರು.

ಇತ್ತೀಚೆಗೆ ಏಐಖಂಆಃ ಕೇಂದ್ರ ಕಚೇರಿಗೆ ಮುತ್ತಿಗೆ ಹಾಕಲು ತೆರಳಿದ್ದ ರೈತರನ್ನು ಪೊಲೀಸರು ತಡೆದ ವೇಳೆ ನಡೆದ ಲಾಠಿಚಾರ್ಜ್ ಕುರಿತು ತೀವ್ರ ಆಕ್ರೋಶ ವ್ಯಕ್ತಪಡಿಸಿದ ಅಶೋಕ್, ಮಹಿಳೆಯರು ಹಾಗೂ ವಯೋವೃದ್ಧ ರೈತರ ಮೇಲಿನ ಹಲ್ಲೆ ಖಂಡನೀಯ ಎಂದು ಹೇಳಿದರು. ಘಟನೆಯ ವಿಡಿಯೋ ಹಾಗೂ ದಾಖಲೆಗಳನ್ನು ನೀಡುವಂತೆ ಮನವಿ ಮಾಡಿದ ಅವರು, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ವಿಧಾನಸಭೆಯಲ್ಲಿ ಒತ್ತಾಯಿಸುವುದಾಗಿ ತಿಳಿಸಿದರು.

ಈ ವೇಳೆ ಮಾತನಾಡಿದ ಸಂಸದ ಡಾ. ಸಿ.ಎನ್. ಮಂಜುನಾಥ್ ಕೂಡ ರೈತರ ಹೋರಾಟಕ್ಕೆ ಬೆಂಬಲ ಸೂಚಿಸಿ, ರೈತರ ಹಿತಾಸಕ್ತಿಗೆ ಧಕ್ಕೆಯಾಗದಂತೆ ಸರ್ಕಾರ ನಡೆದುಕೊಳ್ಳಬೇಕು ಎಂದು ಅಭಿಪ್ರಾಯಪಟ್ಟರು.

ಸ್ವಿಫ್ಟ್ ಸಿಟಿ ಯೋಜನೆ ಅಭಿವೃದ್ಧಿಗಾಗಿ ಅಲ್ಲ, ಹಣ ಸಂಗ್ರಹಿಸುವ ಉದ್ದೇಶದಿಂದ ರೂಪಿಸಿರುವ "ಫಂಡ್ ರೈಸಿಂಗ್ ಪ್ರಾಜೆಕ್ಟ್" ಎಂದು ಆರೋಪಿಸಿದ ಆರ್. ಅಶೋಕ್, ಬಿಡದಿ ಮತ್ತು ಸರ್ಜಾಪುರದಲ್ಲಿ ನಡೆಯುತ್ತಿರುವ ಭೂಸ್ವಾಧೀನ ಪ್ರಕ್ರಿಯೆ ರೈತರ ಬದುಕಿನ ಮೇಲೆ ಗಂಭೀರ ಪರಿಣಾಮ ಬೀರುತ್ತದೆ ಎಂದು ಟೀಕಿಸಿದರು.

ಆನೇಕಲ್ : ಸಮಾಜ ಸೇವಕರೂ ಹಾಗೂ ಯುವ ನಾಯಕರೂ ಆದ ಹೆಬ್ಬಗೋಡಿ ಬಾಸ್ಕರ್ ಅವರ ಸಮಾಜ ಸೇವೆ ಮತ್ತು ಜನಪರ ಕಾರ್ಯಕ್ರಮಗಳನ್ನು ಗುರುತಿಸಿ, ಯುನೈಟೆಡ್ ಅಮೆರಿಕನ್ ಯೂನಿವರ್ಸಿಟಿ 2026ನೇ ಸಾಲಿನ ಗೌರವ ಡಾಕ್ಟರೇಟ್ (ಊಂಟಿಂಡಿಚಿಡಿಥಿ ಆಂಛಿಣಂಡಿಚಿಣ ಜ) ನೀಡಿ ಸನ್ಮಾನಿಸಿದೆ ಎಂದು ತಿಳಿಸಲಾಗಿದೆ. ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್‌ಗಳು ಸಮಾಜ ಸೇವೆ, ನಾಯಕತ್ವ ಮತ್ತು ವಿವಿಧ ಕ್ಷೇತ್ರಗಳಲ್ಲಿ ನೀಡಿದ ವಿಶೇಷ ಕೊಡುಗೆಗಳನ್ನು ಗೌರವಿಸುವ ಉದ್ದೇಶದಿಂದ ಪ್ರದಾನವಾಗುತ್ತವೆ.

ಮಲವನ್ನು ಸ್ವಚ್ಛಗೊಳಿಸುವ ಕೆಲಸಕ್ಕೆ ನೇಮಿಸಿಕೊಳ್ಳುವುದು ನಿಷೇಧ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು;ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಕಾಯ್ದೆ 2013ರ ಮಲ ಹೊರುವ ಪದ್ಧತಿಗೆ ನಿಷೇಧ ಕಾನೂನು ಅಡಿಯಲ್ಲಿ ಯಾವುದೇ ವ್ಯಕ್ತಿಯನ್ನು ಕೈಯಿಂದ ಮಲವನ್ನು ಸ್ವಚ್ಛಗೊಳಿಸುವ ಕೆಲಸಕ್ಕೆ ನೇಮಿಸಿಕೊಳ್ಳುವುದು ಮತ್ತು ತೊಡಗಿಸಿಕೊಳ್ಳುವುದು ಕಾನೂನು ಬಾಹಿರವಾಗಿದ್ದು ಇಂತಹ ಅಮಾನವೀಯ ಘಟನೆ ನಡೆದರೆ ಕೂಡಲೇ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಮಹಾನಗರ ಪಾಲಿಕೆ ಆಯುಕ್ತರಾದ ಶುಭ ಅವರು ತಿಳಿಸಿದರು.

ತುಮಕೂರು ಮಹಾನಗರ ಪಾಲಿಕೆ ಕಚೇರಿ ಸಭಾಂಗಣದಲ್ಲಿ ಸೋಮವಾರ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಕಾಯ್ದೆ 2013ರ ಬಗ್ಗೆ ಅರಿವು ಮೂಡಿಸುವ ಕಾರ್ಯಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು ಕಾಯ್ದೆಯ ಮುಖ್ಯ ಉದ್ದೇಶಗಳನ್ನ ಎಲ್ಲರೂ ತಿಳಿಯಬೇಕಾಗಿದೆ. ನಮ್ಮ ದೇಶದಲ್ಲಿ ಪ್ರತಿಯೊಬ್ಬರಿಗೂ ಘನತೆಯಿಂದ ಬದುಕುವ ಮೂಲಭೂತ ಹಕ್ಕನ್ನ ಪ್ರಜಾಪ್ರಭುತ್ವ ನೀಡಿದ್ದು ಯಾವುದೇ ವ್ಯಕ್ತಿ ಸ್ಥಳೀಯ ಪ್ರಾಧಿಕಾರ ಅಥವಾ ಗುತ್ತಿಗೆದಾರ ಚರಂಡಿಗಳಲ್ಲಿನ ಸೆಪ್ಟಿಕ್ ಟ್ಯಾಂಕ್ ಗಳಲ್ಲಿನ ಮಲವನ್ನು ಕೈಯಿಂದ ಸ್ವಚ್ಛಗೊಳಿಸುವ,ಸಾಗಿಸುವ ವೇಳೆ ಸೂಕ್ತ ಸೇಫ್ಟಿ ಪರಿಕರಗಳಿಲದೇ ಮಾಡುವ ಕೆಲಸದಲ್ಲಿ ಯಾರನ್ನಾದರೂ ತೊರಗಿಸಿಕೊಂಡರೆ ಅದು ಕಾನೂನು ಬಾಹಿರವಾಗಿದ್ದು ಅಪಾಯಕಾರಿ ಸ್ವಚ್ಛತೆಗೆ ನಿಷೇಧ ಅಡಿಯಲ್ಲಿ ಶಿಕ್ಷೆಗೆ ಗುರಿಪಡಿಸಲಾಗುವುದು ಬದಲಿಗೆ ಪಾಲಿಕೆ ಯಂತ್ರೋಪಕರಣ ಬಳಸಿ ಎಂದು ತಿಳಿಸಿದರು..

ಈ ಸಂದರ್ಭದಲ್ಲಿ ದವನ ಭೂಮಿಗೆ ಸಾಂಸ್ಕೃತಿಕ ಟ್ರಸ್ಟ್ ಕಲಾತಂಡದ ವತಿಯಿಂದ ಕಾರ್ಯಗಾರದ ಮುಖ್ಯ ಉದ್ದೇಶಗಳನ್ನ ಕುರಿತು ನಾಟಕದ ಮೂಲಕ ಮಲ ಹೊರುವ ಅನಿಷ್ಠ ಪದ್ಧತಿಯ ವಿರುದ್ಧ ನಾಟಕವನ್ನು ಪ್ರಸ್ತುತ ಪಡಿಸಿ ಗಮನ ಸೆಳೆದರು

ಈ ಕಾರ್ಯಕ್ರಮದಲ್ಲಿ ಇಇ ವಿನಯ್ ಕುಮಾರ್, ಎಇಇ ಪ್ರವೀಣ್ ಕುಮಾರ್, ಸಫಾಯಿ ಕರ್ಮಚಾರಿ ವೇದಿಕೆಯ ಸಮಿತಿಯ ಓಬಳೇಶ್, ಮಹಾನಗರ ಪಾಲಿಕೆಯ ಯುಜಿಡಿ ಹಿರಿಯ ಕಿರಿಯ ಅಭಿಯಂತರರು, ಹೋಟೆಲ್ ಅಸೋಸಿಯೇಷನ್, ಗುತ್ತಿಗೆದಾರರು, ಪಾಲಿಕೆಯ ಸೆಕ್ಕಿಂಗ್ ಅಂಡ್ ಜೆಟ್ಟಿಂಗ್ ಕಾರ್ಮಿಕರು, ಪ್ರೈವೇಟ್ ಸೆಪ್ಟಿಕ್ ಟ್ಯಾಂಕರ್ ಕಾರ್ಮಿಕರು, ಕಲಾವಿದರಾದ ಕಾಂತರಾಜು ಕೌತಮಾರನಹಳ್ಳಿ, ಡಿಸಿ ಕುಮಾರ್, ಬಾಲಾಜಿ, ತರಣ್ ಕೃಷ್ಣ, ಶಾಂತ, ಸಾಗರ್, ಸಲೀಂಖಾನ್ ಸೇರಿದಂತೆ ಇತರರು ಉಪಸ್ಥಿತರಿದ್ದರು



ಸಣ್ ಸುದ್ದಿ

ಮಧುಗಿರಿಯಲ್ಲಿ ಮಧುಗಿರಿ ಶೈ.ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ದ ಸರ್ವ ಸದಸ್ಯರ ಸಭೆ ನಡೆಸಲಾಯಿತು.ಶಿಕ್ಷಕರಾದ ಸುರೇಶ್,ಪ್ರಕಾಶ್, ಚೆನ್ನಬಸಪ್ಪ, ಬಿ.ಟಿ.ಗೋಪಾಲಕೃಷ್ಣ,ರಾಜಶೇಖರ್,ಕಾವ ಾಕ್ಷ ಮ್ಮ, ಶಿವಶಂಕರ್, ವಿದ್ಯಾಶ್ರೀಯವರನ್ನು ಜಿಲ್ಲಾ ಸಂಘಕ್ಕೆ ನಾಮಿನಿ ನಿರ್ದೇಶಕರನ್ನಾಗಿ ನೇಮಿಸಲಾಯಿತು. ಜಿಲ್ಲಾಧ್ಯಕ್ಷ ದೇವರಾಜು, ತಾಲ್ಲೂಕು ಅಧ್ಯಕ್ಷ ರಮೇಶ್, ಜಿಲ್ಲಾ ಕಾರ್ಯದರ್ಶಿ ನರಸಿ ಂಹ ಮೂರ್ತಿ, ತಾಲ್ಲೂಕು ಕಾರ್ಯದರ್ಶಿ ಶಿವಕುಮಾರ್, ನಿರ್ದೇ ಶಕ'ರಾದ ನೇತ್ರಾವತಿ, ಅಶ್ವತ್ಥಯ್ಯ, ಲತಾಮಣಿ,ಅಶ್ವಿನಿ, ಬಿಆರ್ ಸಿ ಪವನ್ ಕುಮಾರ್ ರೆಡ್ಡಿ ಉಪಸ್ಥಿತರಿದ್ದರು.

ಮಕ್ಕಳೊಂದಿಗೆ ಬಿಸಿ ಊಟ ಸವಿದ ಜಿಲ್ಲಾ ಪಂಚಾಯಿತಿ; ಸಿಇಓ ಅಶ್ವಿಜ ಬಿ.ವಿ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು : ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದರ ಜೊತೆ ರುಚಿ ಮತ್ತು ಶುಚಿಯಾದ ಬಿಸಿ ಊಟ ನೀಡಬೇಕು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಶ್ವಿಜ ಬಿ.ವಿ ಶಿಕ್ಷಕರಿಗೆ ಸೂಚನೆ ನೀಡಿದರು. ತುಮಕೂರು ತಾಲ್ಲೂಕು ಅರೆಗುಜ್ಜನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿ ಕದರನಹಳ್ಳಿ ಗ್ರಾಮದ ಸರ್ಕಾರಿ ಪ್ರಾಥಮಿಕ ಪಾಠ ಶಾಲೆಗೆ ಇಂದು ಭೇಟಿ ನೀಡಿ ಮಕ್ಕಳ ಜೊತೆ ಊಟ ಸವಿದು ಮಾತನಾಡಿದ ಅವರು, ಮಕ್ಕಳಿಗೆ ಉತ್ತಮ ಶಿಕ್ಷಣ ಎಷ್ಟು ಪ್ರಮುಖವೋ, ಶುಚಿ ಮತ್ತು ರುಚಿಯಾದ ಊಟ ಕೂಡ ಅಷ್ಟೇ ಪ್ರಮುಖವಾದದ್ದು. ಹೆಚ್ಚು ತರಕಾರಿ ಬಳಸಿ ಪೌಷ್ಠಿಕ ಆಹಾರ ನೀಡಬೇಕು. ಪ್ರತೀ ದಿನ ವೇಳಾ

ಪಟ್ಟಿಯಲ್ಲಿರುವ ಆಹಾರವನ್ನೇ ನೀಡಬೇಕು. ತಪ್ಪದೇ ಮೊಟ್ಟೆ ಮತ್ತು ಬಾಳೆಹಣ್ಣನ್ನು ನೀಡಬೇಕು ಎಂದರು. ಮಕ್ಕಳಿಗೆ ಊಟ ನೀಡುವ ಮೊದಲು ಶಿಕ್ಷಕರು ಊಟ ಸವಿದ ನಂತರ ಮಕ್ಕಳಿಗೆ ಊಟ ನೀಡಬೇಕು ಎಂದರು. ಶಾಲಾ ಆವರಣದಲ್ಲಿ ಉತ್ತಮ ಪರಿಸರಕಾಪಾಡಿಕೊಳ್ಳಬೇಕು ಎಂದು ಶಿಕ್ಷಕರಿಗೆ ತಾಕೀತು ಮಾಡಿದರು.

SIR ನಮೂನೆಗಳ ವಿತರಣೆ :
ಕದರನಹಳ್ಳಿ ಗ್ರಾಮದಲ್ಲಿ ಖಐಖ ಎನ್ಯೂಮರೇಶನ್ ನಮೂನೆಗಳನ್ನು ವಿತರಣೆ ಮಾಡಿದರು. ಪ್ರತಿ ಮನೆ-ಮನೆಗೆ ಖಐಖ ಎನ್ಯೂಮರೇಶನ್ ನಮೂನೆಗಳನ್ನು ವಿತರಿಸಿ, ಆ ನಂತರ ಭರ್ತಿ ಮಾಡಿದ ನಮೂನೆಗಳನ್ನು ಪಡೆಯುವಂತೆ ಬಿ.ಎಲ್.ಓ ಗಳಿಗೆ ಸೂಚನೆ ನೀಡಿದರು.

ನೀರು ಶುದ್ಧೀಕರಣ ಘಟಕ ಪರಿಶೀಲನೆ : ತುಮಕೂರು ತಾಲ್ಲೂ ಕು ಊರ್ಡಿಗೆರೆ ಗ್ರಾಮ ಪಂಚಾಯಿತಿ ಕರಡಿ ಗು ಡ್ಡಕೆರೆ ಬಳಿ ಪ್ರಗತಿಯಲ್ಲಿರುವ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ನೀರು ಶುದ್ಧೀಕರಣ ಘಟಕಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕಾಮಗಾರಿಯನ್ನು ಶೀಘ್ರದಲ್ಲಿ ಪೂರ್ಣಗೊಳಿಸಿ

ಸಾರ್ವಜನಿಕರಿಗೆ ಶುದ್ಧ ನೀರು ಒದಗಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಈ ವೇಳೆ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಲಕ್ಷ್ಮಿ ನಾರಾಯಣ, ಸಹಾಯಕ ಕಾರ್ಯಪಾಲಕ ಇಂಜಿನಿಂ ಯ ರ್ ಕೃಷ್ಣಕಾಂತ್, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹಾಜರಿದ್ದರು.

ಕನ್ನಡ ಭಾಷಾ ಕಲಿಕೆ ಕಾಯ್ದೆ ಪೂರ್ಣ ಅನುಷ್ಠಾನವಾಗಲಿ' ಪ್ರೊ. ಬರಗೂರು ರಾಮಚಂದ್ರಪ್ಪ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: 2015ರಲ್ಲಿ ಜಾರಿಗೆ ಬಂದ ಕನ್ನಡ ಭಾಷಾ ಕಲಿಕೆ ಕಾಯ್ದೆ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನವಾಗಿಲ್ಲ. ಕೇಂದ್ರ ಪಠ್ಯಕ್ರಮ ಇರುವ ಶಾಲೆಗಳು ಒಂದು ಭಾಷೆಯಾಗಿ ಕನ್ನಡ ಕಲಿಸಲು ಹಿಂದೇಟು ಹಾಕುತ್ತಿವೆ. ಸರ್ಕಾರಿ ಕಾಲೇಜುಗಳಂತೆ ಖಾಸಗಿ ವಿಶ್ವವಿದ್ಯಾಲಯಗಳ ಸ್ವಾಯತ್ತ ಕಾಲೇಜುಗಳಲ್ಲಿ ನಾಲ್ಕು ಸೆಮಿಸ್ಟರ್ ವರೆಗೆಕನ್ನಡ ಭಾಷೆ ಕಲಿಸಬೇಕು ಎಂದುಸಾಹಿತಿ ಪ್ರೊ.ಬರಗೂರು ರಾಮಚಂದ್ರಪ್ಪ ಒತ್ತಾಯಿಸಿದರು.

ನಗರದ ಕನ್ನಡ ಭವನದಲ್ಲಿ ಭಾನುವಾರ ಅಮೂಲ್ಯ ಪುಸ್ತಕ ಪ್ರದರ್ಶನ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಲೇಖಕಿಯರ ಸಂಘದಿಂದ ಹಮ್ಮಿಕೊಂಡಿದ್ದ ತಜ್ಞವೈದ್ಯ, ಲೇಖಕ ನಾಗರಾಜು ಜಿ.ಬಿ. ಭೈರೇನಹಳ್ಳಿ ಅವರ 'ತಲೆಗೆ ಬಿದ್ದ ಏಟು' ಕಥಾ ಸಂಕಲನ ಬಿಡುಗಡೆಗೊಳಿಸಿ ಮಾತನಾಡಿದರು.

ಕನ್ನಡವನ್ನು ಒಂದು ಭಾಷೆಯಾಗಿ ಕಲಿಸದ ಖಾಸಗಿ ವಿಶ್ವ-ವಿದ್ಯಾಲಯಗಳಿಗೆ ರಾಜ್ಯದಲ್ಲಿ ಜಾಗಕೊಡುವುದಿಲ್ಲ ಎಂದು ಹೇಳಬೇಕು. ಇದು ಕನ್ನಡ ಸಾಹಿತ್ಯ, ಸಂಸ್ಕೃತಿ, ಪತ್ರಿಕೆ, ನಾಟಕ, ಸಿನಿಮಾ ಉಳಿಸುವ ಕೆಲಸವಾಗಲಿದೆ ಎಂದು ಪ್ರೊ.ಬರಗೂರು ಹೇಳಿದರು.

ಕನ್ನಡ ಕಲಿಸದಿದ್ದರೆ ಸಿಬಿಎಸ್‌ಸಿ ನಮಗೆ ಬೇಕಾಗಿಲ್ಲ, ರಾಜ್ಯದಲ್ಲಿ ಸಿಬಿಎಸ್ ಪದ್ಧತಿ ಕಾಲಿಡ ಕೂಡದು' ಎಂದು ಹೇಳುವ ದೃಢವಾದ ಕಾನೂನು ತರಲು ಸಾಧ್ಯವಿಲ್ಲವೆ, ಇದಕ್ಕೆ ಸಂವಿಧಾನದಲ್ಲಿ ಅವಕಾಶ ಇಲ್ಲವೇ ಎಂದು ಸರ್ಕಾರ ಕೇಳ ಬೇ ಕಿದೆ. ಕನ್ನಡ ಕಲಿಸದ ವಿಶ್ವವಿದ್ಯಾಲಯಗಳ ಸ್ವಾಯತ್ತ ಕಾಲೇಜು, ಶಾಲೆಗಳು ರಾಜ್ಯದಲ್ಲಿ ಇರಲು ಲಾಯಕ್ಕಿಲ್ಲ ಎಂಬ ಸನ್ನಿವೇಶ ಸೃಷ್ಟಿಯಾಗಬೇಕು ಎಂದರು.ಕೃತಿಯ ಲೇಖಕ ನಾಗರಾಜ ು ತಾವು ನೋಡಿದ್ದನ್ನು ತನ್ನದಾಗಿಸಿಕೊಂಡು ಬರೆದಿದ್ದಾರೆ. ತಮ್ಮ ಪರಿಸರದ ಒಳಗಡೆ ಕಂಡದ್ದನ್ನು, ಮನಸ್ಸಿನ ಭಾವನೆಗಳನ್ನು ಕಥೆಯಲ್ಲಿ ಕಟ್ಟುತ್ತಾ ಹೋಗಿದ್ದಾರೆ. ಸಾಮಾಜಿಕ ನೈತಿಕತೆ ಇಲ್ಲಿನ ಕಥೆಗಳ ಕೇಂದ್ರ ಪ್ರಜ್ಞೆಯಾಗಿದೆ. ಸಮಾಜದಲ್ಲಿನ ಸುಳ್ಳು ಸಂಕಥನನಗಳ ಸೃಷ್ಟಿ, ಧರ್ಮದ್ವೇಷದ ರಾಜಕೀಯ, ಇತರೆ ಸೂಕ್ಷ್ಮ ವಿಚಾರಗಳಿಗೆ ತಮ್ಮದೇ ಆದ ರೀತಿಯಲ್ಲಿ ಪ್ರತಿಕ್ರಿಯೆ ನೀಡಿದ್ದಾರೆ ಎಂದು ಹೇಳಿದರು. ಮುಖ್ಯಅತಿಥಿಯಾಗಿ ಆಗಮಿಸಿದ್ದ ಹಿರಿಯ ಪತ್ರಕರ್ತ, ಸಾಹಿತಿ ಚ.ಹ. ರಘುನಾಥ ಮಾತನಾಡಿ, ಕಥೆಗಾರ ನಾಗರಾಜು ಅವರು ಅಭಿವ್ಯಕ್ತಿಯ ಹುಡುಕಾಟದಲ್ಲಿ ಇರುವ ಬರಹಗಾರ. ಕವಿತೆಯಿಂದ ಆರಂಭಿಸಿ ಕಾದಂಬರಿ, ಪ್ರಬಂಧ, ಸಣ್ಣ ಕಥೆಗಳನ್ನು ರಚಿಸಿದ್ದಾರೆ. ವೈದ್ಯ ವೃತ್ತಿಯ ಜೊತೆಗೆ ಸಾಹಿತ್ಯವನ್ನೂ ಪ್ರವೃತ್ತಿಯಾಗಿ ತೆಗೆದು ಕೊಂಡು ಗುಣಮಟ್ಟದ ಸಾಹಿತ್ಯ ರಚಿಸಿದ್ದಾರೆ ಎಂದು ಹೇಳಿದರು.ಕೃತಿಕಾರ ಡಾ.ನಾಗರಾಜು ಜಿ.ಬಿ ಭೈರೇನಹಳ್ಳಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಎಸ್. ಸಿದ್ದಲಿಂಗಪ್ಪ, ಲೇಖಕಿಯರಾದ ಮಲ್ಲಿಕಾ ಬಸವರಾಜು, ಆಶಾ ಬಗ್ಗನಡು ಭಾಗವಹಿಸಿದ್ದರು

ತೆಂಗು, ಅಡಿಕೆ ಬೆಳೆಗಳ ನಡುವೆ ಬೆಳೆಯುವಂತಹ ಬೆಳೆಗಳ ಬಗ್ಗೆ ರೈತರಿಗೆಮಾಹಿತಿ ನೀಡಿ – ಶಾಸಕ ಸಿ.ಬಿ.ಸುರೇಶ್‌ಬಾಬು

ಸೂರ್ಯಪ್ರಗತಿನ್ಯೂಸ್.ಕಾಂ

ಚಿಕ್ಕನಾಯಕನಹಳ್ಳಿ:-ತಾಲ್ಲೂಕಿನಲ್ಲಿ ತೋಟಗಾರಿಕೆ ಬೆಳೆಗಳ ಬಗ್ಗೆ ರೈತರಿಗೆ ಸರಿಯಾದ ರೀತಿಯಲ್ಲಿ ಮಾಹಿತಿ ನೀಡಿ. ತೆಂಗು, ಅಡಿಕೆ ಬೆಳೆಗಳ ನಡುವೆ ಬೆಳೆಯ ಬಹುದಾದಂತಹ ಲಾಭದಾಯಕ ಬೆಳೆಗಳ ಬಗ್ಗೆ ಅಧಿ ಕಾರಿಗಳು ರೈತರಿಗೆ ಮಾರ್ಗದರ್ಶನ ಮಾಡುವಂತೆ ಶಾಸಕ ಸಿ.ಬಿ.ಸುರೇಶ್‌ಬಾಬು ಸೂಚಿಸಿದರು.

ಪಟ್ಟಣದ ತೋಟಗಾರಿಕೆ ಇಲಾಖೆಯ ಕಚೇರಿಗೆ ಬೇಟಿ ನೀಡಿ ಪ್ರಗತಿ ಪರಿಶೀಲನೆ ನಡೆಸಿ ಮಾತನಾಡಿದ ಅವರು ನಮ್ಮ ಭಾಗದಲ್ಲಿ ತೆಂಗಿನ ಬೆಳೆ ಹೆಚ್ಚಾಗಿದ್ದು ಅದಕ್ಕೆ ಸಂಬಂಧಿಸಿದಂತೆ ಕೊಬ್ಬರಿಯನ್ನು ಹೊರತು ಪಡಿಸಿ ಅದರ ಉಪ ಉತ್ಪನ್ನಗಳ ತಯಾರಿಸುವ ಘಟಕಗಳ ಸ್ಥಾಪನೆ ಮಾಡಬೇಕು, ಹಾಗು ನಮ್ಮ ಈ ಮಣ್ಣಿನಲ್ಲಿ ಬೆಳೆಯ ಬಹುದಾದಂತಹ ಬೆಳೆಗಳ ಅದರಿಂದ ಸಿಗಬಹುದಾದ ಲಾಭ ನಷ್ಟದ ಹಾಗೂ ಬೆಳೆಯ ಬಗ್ಗೆ ರೈತರಲ್ಲಿ ಭರವಸೆಯನ್ನು ಮೂಡಿಸುವಂತಹ ಕೆಲಸವನ್ನು ಅಧಿಕಾರಿಗಳು ಮಾಡಬೇಕು. ಹಾಗೂ ಗಣಿಬಾದಿತ ಪ್ರದೇಶಾಭಿವೃದ್ಧಿ ಯೋಜನೆಯಡಿ ಕೃಷಿಗೆ ಸಂಬಂಧಿಸಿದಂತೆ ಪ್ರಯೋಗಶಾಲೆಯನ್ನು ತೆರೆಯುವ ಬಗ್ಗೆ ದಾಖಲೆ ಸೂಚನೆ ನೀಡಿದ ಅವರು ತೆಂಗಿನ ಬಿಳಿನೊಣದ ಹಾವಳಿಯನ್ನು ತಡೆಯಲು ಅಗತ್ಯ ಕ್ರಮಕೈಗೊಳ್ಳುವಂತೆ ತಿಳಿಸಿದ ಅವರು ಈ ಹಿಂದೆ ಇದಕ್ಕೆ ಡ್ರೋಣ್ ಬಳಸಿ ಔಷಧಿ ಸಿಂಪಡಿಸುವ ಕೆಲಸ ಮಾಡಲಾಯಿತಾದರು ಅದು ಯಶಸ್ವಿಯಾಗಲಿಲ್ಲ ತೆಂಗಿನ ಮರಕ್ಕೆ ಕೆಳಭಾಗದಿಂದ ಸಿಂಪಡಿಸುವಂತಹ ಡ್ರೋಣ್‌ಗಳನ್ನು ಸರ್ಕಾರವು ತಾಲ್ಲೂಕಿಗೊಂದರಂತೆ ನೀಡಬೇಕು ಎಂದರು.

ಸಭೆ ಯ ಲ್ಲಿ ತೋಟಗಾರಿಕೆ ಇಲಾಖೆಯ ಉಪನಿರ್ದೇಶಕರಾದ ಶಾರದಮ್ಮ ಮಾತನಾಡಿ ಈಗಾಗ ಲೇ ಸರ್ಕಾರದಿಂದ ಇಲಾಖೆಗೆ ಬಿಡುಗ ಡೆ ಯಾಗಿರುವ ಅನುದಾನವನ್ನು ಸರಿಯಾ ಗಿ ಬೇಗ ಮುಗಿಸಿದರೆ ಇನ್ನು ಹೆಚ್ಚಿನ ಅನುದಾನ ವನ್ನು ಕೇಳಬಹುದು ಅದ್ದರಿಂದ ಇರುವಂತಹ ಯೋಜನೆಗಳ ಮೂಲಕ ರೈತರಿಗೆ ಅಗತ್ಯ ನೆರವನ್ನು ನೀಡುವಂತಹ ಕೆಲಸವನ್ನು ಬೇಗ ಮುಗಿಸಿ ಎಂದರು.

ಈ ಸಂದರ್ಭದಲ್ಲಿ ಹಿರಿಯಕ ಸಹಾಯಕ ನಿರ್ದೇಶಕ ರಾಜಪ್ಪ ಮಾಹಿತಿ ನೀಡಿ ಕಳೆದ ಮೂರು ವರ್ಷಗಳಿಂದ ರಾಷ್ಟ್ರೀಯ ಮಿಷನ್ ಯೋಜನೆಯಡಿ ಬೆಳಗಳಿಗೆ ಸಹಾಯಧನ ಹಾಗೂ ಶೇಖರಣಾ ಘಟಕ ಮತ್ತು ಲಘು ಪೋಷಕಾಂಶಗಳು ಜೈವಿಕ ನಿಯಂತ್ರಕಗಳನ್ನು 1ಕೋಟಿ 42 ಲಕ್ಷ ವೆಚ್ಚದಲ್ಲಿ 827 ಫಲಾನುಭವಿಗಳಿಗೆ ವಿತರಿಸಲಾಗಿದೆ, ಹನಿನೀ ರಾವರಿ ಯೋಜನೆಯಡಿ 7ಕೋಟಿ 70ಲಕ್ಷದ ವೆಚ್ಚದಲ್ಲಿ 1538 ಫಲಾನುಭವಿಗಳಿಗೆ ವಿತರಿಸ ಲಾಗಿದೆ, ಉತ್ಪಾದನಾ ಸುಧಾರಣಾ ಯೋಜನೆಯಡಿಯಲ್ಲಿ 6ಕೋಟಿ 54ಲಕ್ಷವೆಚ್ಚದಲ್ಲಿ 2535 ಫಲಾನುಭವಿಗಳಿಗೆ ಪರಿಕರಣಗಳನ್ನು ವಿತರಿಸಲಾಗಿದ್ದು ಇನ್ನು ಮಧುವನ ಮತ್ತು ಜೇನ ುಸಾಕಣೆ, ಪಪ್ಪಾಯ ಬೆಳೆ, ಬಾಳೆ, ಕಾಳುಮೆಣಸು, ಗುಲಾಬಿ ಸೇರಿದಂತೆ ಸಾವಯವ ಗೊಬ್ಬರ ಉತ್ಪಾದನೆಗಾಗಿ ಪರಿಕರಗಳನ್ನು ನೀಡಲಾಗುತ್ತಿದೆ ಎಂಬ ಮಾಹಿತಿ ನೀಡಿದರು.

ಹಾಸನ, ತುಮಕೂರು ಹಾಗೂ ಮಂಡ್ಯ ಜಿಲ್ಲೆಗಳಲ್ಲಿ ಅಕ್ರಮ ಬೀಜ ದಾಸ್ತಾನು ಜಪ್ತಿ

ಸೂರ್ಯಪ್ರಗತಿನ್ಯೂಸ್.ಕಾಂ

ಬೆಂಗಳೂರು :ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ನೇತೃತ್ವದ ಪ್ರತ್ಯೇಕ ತಂಡಗಳು ರಾಜ್ಯದ ಹಾಸನ, ತುಮಕೂರು ಹಾಗೂ ಮಂಡ್ಯ ಜಿಲ್ಲೆಗಳಲ್ಲಿ ವಿವಿಧ ರಸಗೊಬ್ಬರ ಮಾರಾಟ ಕೇಂದ್ರಗಳಿಗೆ ಭೇಟಿ ನೀಡಿ ಅನಧಿಕೃತವಾಗಿ ಸಂಗ್ರಹಿಸಲಾಗಿದ್ದ ಬೀಜ ಮತ್ತು ಸೂಕ್ಷ್ಮ ಪೋಷಕಾಂಶಗಳನ್ನು ವಶಪಡಿಸಿಕೊಂಡಿದ್ದಾರೆ. ಅನಧಿಕೃತವಾಗಿ ಬೀಜ, ರಸಗೊಬ್ಬರ ದಾಸ್ತಾನು, ಮಾರಾಟ ನಿಯಂತ್ರಿಸಲು ಕೃಷಿ ಇಲಾಖೆ ಆಯುಕ್ತ ಡಾ: ಬಿ.ಸಿ.ಸತೀಶ್ ಅವರ ಸೂಚನೆ ಮೇರೆಗೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕೃಷಿ ಅಧಿಕಾರಿಗಳು ಮಿಂಚಿನ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಹಾಸನ ಜಿಲ್ಲೆ ಸಾಲಗಾಮೆ ಹೋಬಳಿ ಕೊಂಡಜ್ಜಿಕೊಪ್ಪಲಿನ ಕಾರ್ತಿಕ ಟ್ರೇಡರ್ಸ್‌ನಲ್ಲಿ ಬೀಜ ಕಾಯ್ದೆ 1966ನ್ನು ಉಲ್ಲಂಘಿಸಿ ಅನುಮತಿ ಇಲ್ಲದೇ ದಾಸ್ತಾನು ಮಾಡಲಾಗಿದ್ದ ಸುಮಾರು 85ಸಾವಿರ ರೂ. ಮೌಲ್ಯದ 180 ಕೆ.ಜಿ. ಹೈಬ್ರಿಡ್ ಮೆಕ್ಕೆಜೋಳ ಬೀಜ, ಅರಸೀಕೆರೆ ತಾಲ್ಲೂಕು ಜಾವಗಲ್ ಹೋಬಳಿ ಪುಷ್ಪಗಿರಿ ಅಗ್ರೋ ಕೇಂದ್ರದಲ್ಲಿ ಅನಧಿಕೃತವಾಗಿ ಸಂಗ್ರಹಿಸಿದ್ದ ಸುಮಾರು 12ಸಾವಿರ ರೂ. ಮೌಲ್ಯದ 30 ಕೆ.ಜಿ. ಹೈಬ್ರಿಡ್ ಮೆಕ್ಕೆಜೋಳ ಹಾಗೂ ಬೇಲೂರು ತಾಲೂಕು ಅರೇಹಳ್ಳಿ ಹೋಬಳಿ ಮದಿಹಳ್ಳಿಯ ಶ್ರೀ ವೆಂಕಟೇಶ್ವರ ಟ್ರೇಡರ್ಸ್‌ನಲ್ಲಿ ಕಾನೂನು ಉಲ್ಲಂಘಿಸಿ ದಾಸ್ತಾನು ಮಾಡಲಾಗಿದ್ದ ಸುಮಾರು 1.77ಲಕ್ಷ ರೂ. ಮೌಲ್ಯದ 88 ಚೀಲ ಯೂರಿಯಾ, ಪಾಸ್ಫೋ ಜಿಪ್ಸಮ್ ಗ್ರ್ಯಾನ್ಯುಲ್ಸ್ ಅನ್ನು ವಶಪಡಿಸಿಕೊಳ್ಳಲಾಗಿದೆ.

ತುಮಕೂರು ಜಿಲ್ಲೆ ಮಧುಗಿರಿ ತಾಲೂಕು ಮಿಡಗೇಶಿ ಹೋಬಳಿಯ ಹಸಿರು ಹೈಟೆಕ್ ಸೀಡ್ಸ್ ಕೇಂದ್ರದಲ್ಲಿ ಅನಧಿಕೃತವಾಗಿ ದಾಸ್ತಾನು ಮಾಡಲಾಗಿದ್ದ ಸುಮಾರು 86ಸಾವಿ ರ ರೂ. ಮೌಲ್ಯದ 22 ಲೀಟರ್ ಸೂಕ್ಷ್ಮ ಪೋಷಕಾಂಶ ಮಿಶ್ರಣವನ್ನು ವಶಪಡಿಸಿಕೊಳ್ಳಲಾಗಿದೆ. ಮಂಡ್ಯ ತಾಲ್ಲೂಕು ಇಂದುವಾಳದಲ್ಲಿ ಅನಧಿಕೃತವಾಗಿ ಸಾಗಾಟ ಮಾಡುತ್ತಿದ್ದ ಸುಮಾರು 300 ಚೀಲ ಎನ್.ಎಫ್. ಎಲ್. ಯೂರಿಯಾವನ್ನು ಮಂಡ್ಯದ ಕೃಷಿ ಅಧಿಕಾರಿಗಳು ಶನಿವಾರ ಜುಲೈ 4ರ ರಾತ್ರಿ ವಶಪಡಿಸಿಕೊಂಡಿದ್ದಾರೆ.

ಬೀಜ, ರಸ 'ಗೊಬ್ಬರ ಮಾರಾಟಗಾರರು ನಿಯ ಮ ಬಾಹಿರವಾಗಿ ಚಟುವಟಿಕೆಗಳನ್ನು ನಡೆಸುತ್ತಿರುವುದು ಕಂಡು ಬಂದರೆ ಕೃಷಿ ಇಲಾಖೆಯು ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಿದೆ ಎಂದು ಕೃಷಿ ಇಲಾಖೆಯು ಪ್ರಕಟಣೆಯಲ್ಲಿ ತಿಳಿಸಿದೆ.

ಮಾದರ ಮಹಾಸಭಾವನ್ನು ಸಂಘಟಿಸಲು ಒಂದು ಸಾವಿರ ಮಂದಿಗೆ ಸದಸ್ಯತ್ವ ಮಾಡಿಸುವ ಗುರಿ ಹೊಂದಲಾಗಿದೆ

ಸೂರ್ಯಪ್ರಗತಿನ್ಯೂಸ್.ಕಾಂ

ಮಧುಗಿರಿ : ತಾಲೂಕಿನಲ್ಲಿ ಮಾದರ ಮಹಾ ಸಭಾವನ್ನು ಸಂಘಟಿಸಲು ಒಂದು ಸಾವಿರ ಮಂದಿಗೆ ಸದಸ್ಯತ್ವವನ್ನು ಮಾಡಿಸುವ ಗುರಿ ಹೊ ಂದಲಾಗಿದೆ ಎಂದು ಮಾದರ ಮಹಾಸಭಾ ತಾಲೂಕು ಅಧ್ಯಕ್ಷ ಗೋಪಾಲಯ್ಯ ತಿಳಿಸಿದರು.

ಪಟ್ಟಣ ದ ಪ್ರವಾಸಿ ಮಂದಿರದಲ್ಲಿ ಶನಿವಾರ ಹಮ್ಮಿ ಕೊ ಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಶುಕ್ರವಾರ ಕೆಲವರು ಸುದ್ದಿಯಲ್ಲಿ ಆರೋಪಿಸಿರುವಂತೆ ಯಾವುದೇ ಪದಾಧಿ ಕಾ ರಿಯನ್ನು ತೆಗೆಯಲು ತಾಲೂಕು ಘಟಕಕ್ಕೆ ಅಧಿಕಾರ ಇಲ್ಲ. ಜಿಲ್ಲಾ ಸಮಿತಿಗೆ ಅಧಿಕಾರವಿದೆ. ನಮ್ಮದು ಕೇವಲ ಅಕಾಡೆಮಿಕ್ ಕಮಿಟಿ ಎಂದು ಅವರು ನನ್ನ ಮೇಲೆ ವಿನಾಕಾರಣ ಆರೋಪ ಮಾಡುತ್ತಿದ್ದು, ಪೂರ್ವಾಗ್ರಹ ಪೀಡಿತ ಉದ್ದೇ ಶದಿ ಂದ ನಡೆಸುತ್ತಿದ್ದಾರೆ. ಅವರು ಸಂಘ ದ ಚಟುವಕಿಕೆಗಳಲ್ಲಿ ನಮ್ಮ ಜೊತೆ ಕೈಜೋಡಿಸಿಲ್ಲ ಅವರ ಪತ್ರಿಕಾಗೋಷ್ಠಿಯನ್ನು ಸಮುದಾಯ ಖಂಡಿಸುತ್ತದೆ ಎಂದರು.

ಮಾದರ ಮಹಾಸಭಾ ಮುಂದಿನ ದಿನಗಳಲ್ಲಿ ಪ್ರತ್ಯೇಕ ಕಚೇರಿ ಪ್ರಾರಂಭಿಸಿ ಶಾಸಕ ಕೆ.ಎನ್. ರಾಜಣ್ಣ ಮತ್ತು ರಾಜೇಂದ್ರ ರಾಜಣ್ಣನವರ ಬಳಿ ಸಂಘಕ್ಕಾಗಿ 5 ಎಕರೆ ಜಮೀನು ನೀಡಲು ಮನವಿ ಮಾಡಿದ್ದು, ಮುಂದಿನ ದಿನಗಳಲ್ಲಿ ಸಂಘ ವನ್ನು ಬಲಿಷ್ಠ ಗೊಳಿಸಲಾಗುವುದು. ಅದೇ ರೀತಿ ವೈದ್ಯಕೀಯ ಕಾಲೇಜು ಸೇರಿದಂತೆ ಉನ್ನತ ಶಿಕ್ಷಣ ಸಂಸ್ಥೆ ತೆರೆಯುವ ಉದ್ದೇಶ ಇದೆ. ಇಲಾಖೆಗಳಲ್ಲಿ ರಾಜ್ಯ ಸರ್ಕಾರದಿಂದ ಬರುವ ಸೌಲತ್ತುಗಳನ್ನು ಕಡು ಬಡವರಿಗೆ ತಲುಪಿ ಸು ವುದು ಮಾದರ ಮಹಾಸಭಾದ ಉದ್ದೇಶ ಎಂದರು.

ಜಿಲ್ಲಾ ಸಂಘಟನಾ ಕಾರ್ಯದರ್ಶಿ ಎಸ್.ಡಿ ಕೃಷ್ಣಪ್ಪ ಮಾತನಾಡಿ ಮಾದಿಗ ಜನಾಂಗದ ಸರ್ವಾಂಗೀಣ ಅಭಿವೃದ್ಧಿಗಾಗಿ ಮಹಾಸಭಾ ಸ್ಥಾಪಿಸಲಾಗಿದೆ. ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗುತ್ತದೆ. ಕೆಲವರು ಸಂಘದ ವಿರುದ್ಧ ಪತ್ರಿಕಾಗೋಷ್ಠಿ ನಡೆಸಿರುವುದು ಸರಿಯಲ್ಲ. ಅವರು ಪತ್ರಿಕಾಗೋಷ್ಠಿಯಲ್ಲಿ ಮಾಜಿ ಶಾಸಕ ಗಂಗನಮಯ್ಯನವರ ಬಗ್ಗೆ ಮಾತಾಡಿರುವುದನ್ನು ವಾಪಸ್ ತೆಗೆದುಕೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲಾ ಉಪಾಧ್ಯಕ್ಷ ದೊಡ್ಡೇರಿ ಕಣಿಮಯ್ಯ ಮಾತನಾಡಿ ಮಾದರ ಮಹಾಸಭಾ ಸಮುದಾಯದ ಆಸ್ತಿ ಅವರ ಪತ್ರಿಕಾಗೋಷ್ಠಿ ಊರ್ಜಿತವಾಗುವುದಿಲ್ಲ. ಈ ಹಿಂದೆ ಇದ್ದ ಕಾರ್ಯದರ್ಶಿ 4 ತಿಂಗಳಾದರೂ ಸಭೆ ಕರೆದಿರಲಿಲ್ಲ.ಸಂಘದಲ್ಲಿಲೋಪದೋಷಗಳಿದ್ದರೆ ಅವರು ಜಿಲ್ಲಾ ಸಮಿತಿ ಮತ್ತು ರಾಜ್ಯ ಸಮಿತಿಯ ಗಮನಕ್ಕೆ ತರಬಹುದಿತ್ತು. ಸ್ವಯಂ ಪ್ರತಿಷ್ಠೆಗಾಗಿ ಪತ್ರಿಕಾಗೋಷ್ಠಿ ಮಾಡಿ ಸಮಾಜಕ್ಕೆ ಕಳಂಕ ತರಲು ಹೊರಟಿದ್ದು, ಸಮುದಾಯವನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಇದು ಯಾರಿಗೂ ಶೋಭೆ ತರುವುದಿಲ್ಲ ಎಂದರು.

ಸುದ್ದಿಗೋಷ್ಠಿಯಲ್ಲಿ ತಾಲೂಕು ಸಂಘಟನಾ ಕಾರ್ಯದರ್ಶಿ ತುಂಡೋಟಿ ರಾಮಾಂಜಿ, ಸಂಘದ ಪದಾಧಿಕಾರಿಗಳಾದ ಸಿದ್ದಾಪುರ ರಂಗಶಾಮಣ್ಣ, ಶಿವಣ್ಣ, ತಿಪ್ಪೇಸ್ವಾಮಿ, ಅಂಜನ್ ಮೂರ್ತಿ, ರಮೇಶ್, ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ರಂಗಪ್ಪ, ತಾಲೂಕು ಸಂಘದ ಸಂಘಟನಾ ಕಾರ್ಯದರ್ಶಿ ರಂಗಧಾಮಯ್ಯ ಇತರರಿದ್ದರು

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ
ಸಂಪರ್ಕಿಸಿ:
9901010109

ಕರಿಕೆರೆ ದೊಡ್ಡಕಟ್ಟೆ ಕೆರೆ ಪುನಶ್ಚೇತನಕ್ಕೆ ಭೂಮಿಪೂಜೆ 17.15 ಲಕ್ಷದ ಕಾಮಗಾರಿಗೆ ಚಾಲನೆ

ಸೂರ್ಯಪ್ರಗತಿನ್ಯೂಸ್.ಕಾಂ

ತಿಪಟೂರು : ತಾಲ್ಲೂಕಿನ ಕರೀಕೆರೆ ಗ್ರಾಮದ ಕೆರೆಯ ಪುನಶ್ಚೇತನ ಕಾಮಗಾರಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ 17 ಲಕ್ಷ ವೆಚ್ಚದ ಕಾಮಗಾರಿಗೆ ಶಾಸಕ ಕೆ.ಷಡಕ್ಷರಿ ಭೂಮಿಪೂಜೆ ನೆರವೇರಿಸಿ ಚಾಲನೆ ನೀಡಿದರು.

ಕಾರ್ಯಕ್ರಮಕ್ಕೂ ಮುನ್ನ ಗ್ರಾಮದ ಬ್ರಹ್ಮಲಿಂಗೇಶ್ವರ ದೇವರ ದರ್ಶನ ಪಡೆದ ಶಾಸಕರು, ಬಳಿಕ ಮಾತನಾಡಿ, ಸರ್ಕಾರದ ವಿವಿಧ ಯೋಜನೆಗಳಿಗೆ ಪೂರಕವಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಡತನ ನಿರ್ಮೂಲನೆ, ಮಹಿಳಾ ಸಬಲೀಕರಣ, ಶಿಕ್ಷಣ, ರೈತಪರ ಕಾರ್ಯಕ್ರಮಗಳು, ಮದ್ಯವರ್ಜನ ಶಿಬಿರಗಳು, ಬೆಳೆ ವಿಮೆ ಹಾಗೂ ಕೆರೆಗಳ ಪುನಶ್ಚೇತನದಂತಹ ಜನಪರ ಸೇವೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ ಎಂದರು.

ತಿಪಟೂರು ತಾಲ್ಲೂಕಿನಲ್ಲಿ ಇದುವರೆಗೆ 16 ಕೆರೆಗಳನ್ನು ಪುನಶ್ಚೇತನಗೊಳಿಸಲಾಗಿದ್ದು, ಕರಿಕೆರೆ ದೊಡ್ಡಕಟ್ಟೆ ಕೆರೆ 17ನೇ ಕೆರೆಯಾಗಿದೆ. ಪ್ರಸ್ತುತ ವರ್ಷದಲ್ಲಿಯೇ ಇನ್ನೂ ಮೂರು ಕೆರೆಗಳ ಪುನಶ್ಚೇತನಕ್ಕೆ ಯೋಜನೆ ರೂಪಿಸಲಾಗಿದೆ ಎಂದು ತಿಳಿಸಿದರು.

ಕೆರೆ ಹೂಳನ್ನು ರೈತರು ಸಮರ್ಪಕವಾಗಿ ಕೃಷಿಗೆ ಬಳಸಿಕೊಳ್ಳಬೇಕು ಹಾಗೂ ಕೆರೆ ಸುತ್ತಲಿನ ಒತ್ತುವರಿ ಜಾಗವನ್ನು ತೆರವುಗೊಳಿಸಿ ಕೆರೆಯ ಸಂರಕ್ಷಣೆಗೆ ಸಹಕರಿಸಬೇಕು ಎಂದರು.

ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಪವನ್ ಮಾತನಾಡಿ ಬೆಳೆ ವಿಮೆ ಕುರಿತು ರೈತರಿಗೆ ಮಾಹಿತಿ ನೀಡಿದರು. ರೈತರ ಮನೆಬಾಗಿಲಿಗೆ ಬೆಳೆ ವಿಮೆ ಸೌಲಭ್ಯ ತಲುಪಿಸುವಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕಾರ್ಯಕರ್ತರ ಪಾತ್ರ ಶ್ಲಾಘನೀಯವಾಗಿದೆ ಎಂದರು.

ತಾಲ್ಲೂ ಕು ಕ್ಷೇತ್ರ ಯೋಜನಾಧಿಕಾರಿ ಉದಯ್ ಕೆ. ಮಾತನಾಡಿ, ಪರಮಪೂಜ್ಯ ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಹಾಗೂ ಮಾತೃಶ್ರೀರವರ ಕೃಪಾಶೀರ್ವಾದದಿಂದ ತಿಪಟೂರು ತಾಲ್ಲೂಕಿನಲ್ಲಿ ಇದುವರೆಗೆ 17 ಕೆರೆಗಳ ಪುನಶ್ಚೇತನ, 14 ವಾತ್ಸಲ್ಯ ಮನೆಗಳ ನಿರ್ಮಾಣ ಹಾಗೂ 27 ಶುದ್ಧಗಂಗಾ ಘಟಕಗಳ ನಿರ್ವಹಣೆ ಸೇರಿದಂತೆ ಹಲವು ಜನಪರ ಸೇವೆಗಳು ನಡೆಯುತ್ತಿದ್ದು, ಇದು ತಾಲ್ಲೂಕಿನ ಜನತೆಗೆ ದೊರೆತಿರುವ ಭಾಗ್ಯವಾಗಿದೆ ಎಂದು ತಿಳಿಸಿದರು.

ಯೋಜನೆಯ ವತಿಯಿಂದ 'ನಮ್ಮೂರು ನಮ್ಮ ಕೆರೆ' ಕಾರ್ಯಕ್ರಮದಡಿ ಕರಿಕೆರೆ ಕೆರೆಯ ಪುನಶ್ಚೇತನಕ್ಕೆ 17.15 ಲಕ್ಷ ಮಂಜೂರಾತಿ ನೀಡಲಾಯಿತು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಮೋಹನ್‌ಕುಮಾರ್, ತಾಲ್ಲೂಕು ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಚ್. ಎಮ್ .ಸುದರ್ಶನ್, ಕೃಷಿಕ ಸಮಾಜದ ನಿರ್ದೇಶಕರಾದ ಮಾರನಗೆರೆ ಸಂಗಮೇಶ್, ಘಟೋದ್ಗಜವಿಶ್ವನಾಥ್, ಬಸವರಾಜು ಹೊಸಳ್ಳಿ, ಮತ್ತಿಹಳ್ಳಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಶಿವಲಿಂಗಯ್ಯ, ಕೆರೆ ಸಮಿತಿ ಅಧ್ಯಕ್ಷ ಕೆ.ಎಚ್.ರಾಜಶೇಖರ್, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಬಿ.ಎಸ್.ದಿನೇಶ್, ಉಪಾದ್ಯಕ್ಷ ರಾಜಶೇಖರ್, ತಾ.ಪಂ ಮಾಜಿ ಸದಸ್ಯ ಸುರೇಶ್‌ಕುಮಾರ್, ಸದಾಶಿವು, ಹಾಜರಿದ್ದರು.

ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ತರಕಾರಿ ಗಂಗಾಧರ್, ಹರೀಶ್‌ಗೌಡ, ಮಲ್ಲಿಗಪ್ಪಾಚಾರ್, ಮತ್ತಿಹಳ್ಳಿ ಹರೀಶಕುಮಾರ್, ಯೋಜನೆಯ ತಾಲ್ಲೂಕು ಯೋಜನಾಧಿಕಾರಿ ಉದಯ್.ಕೆ., ಕೆರೆ ಅಭಿಯಂತರ ಭರತ್, ಕೃಷಿ ಅಧಿಕಾರಿ ಪ್ರಮೋದ್ ಕುಮಾರ್, ವಲಯ ಮೇಲ್ವಿಚಾರಕ ಮನೀಷ್, ಮೀನಾಕ್ಷಮ್ಮ, ಹಾಲು ಉತ್ಪಾದಕರ ಸಂಘ ದ ಮಾಜಿ ಅಧ್ಯಕ್ಷ ಪಂಚಾಕ್ಷರಯ್ಯ, ಮಂಜುನಾಥ್, ಪ್ರಶಾಂತ್.ಕೆ.ಆರ್, ಕೆರೆಯ ಸಮಿತಿಯ ಸದಸ್ಯರಾದ ಮರುಳಸಿದ್ದಸ್ವಾಮಿ, ಓಂಕಾರಮೂರ್ತಿ, ಹರೀಶ್.ಕೆ.ಬಿ,ಬಸವರಾಜು, ಕುಮಾರಸ್ವಾಮಿ, ಉಮೇಶ್, ರಮೇಶ್, ಘನಶ್ಯಾಮ್, ಆಟೋಪಾಲಾಕ್ಷಮೂರ್ತಿ, ಚಂದ್ರಣ್ಣ. ಚಂದ್ರಶೇಖರ್, ನವೀನಕುಮಾರ್. ಕಾಂತರಾಜು, ಹಾಲಸಿದ್ದಯ್ಯ, ಜೆಸಿಬಿ ಗಣೇಶ್, ಸೇವಾ ಪ್ರತಿನಿಧಿಗಳು, ಗ್ರಾಮದ ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಅಕ್ಷರ ದಾಸೋಹ, ಯೋಜನೆಯಡಿ ಮೊಟ್ಟೆ ವಿತರಣೆಗೆ ನಿಗದಿಪಡಿಸಿರುವ ದರವನ್ನು ತಕ್ಷಣ ಪರಿಷ್ಕರಿಸುವುದು

ತುಮಕೂರು: ಅಕ್ಷರ ದಾಸೋಹ, ಮಧ್ಯಾಹ್ನದ ಬಿಸಿಯೂಟ ಯೋಜನೆಯಡಿ ಮೊಟ್ಟೆ ವಿತರಣೆಗೆ ನಿಗದಿಪಡಿಸಿರುವ ದರವನ್ನು ತಕ್ಷಣ ಪರಿಷ್ಕರಿಸುವುದು ಅಥವಾ ಇಲಾಖೆಯಿಂದಲೇ ಮೊಟ್ಟೆ ಸರಬರಾಜು ಮಾಡುವಂತೆ ಸರಕಾರದ ಮೇಲೆ ಒತ್ತಡತರುವಂತೆ ಕರ್ನಾಟಕರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದರಾಜ್ಯಾಧ್ಯಕ್ಷರಿಗೆ ಹಾಗೂ ರಾಜ್ಯ ಪ್ರಧಾನ ಕಾರ್ಯದರ್ಶಿಗಳಿಗೆ ಸಂಘದ ತುಮಕೂರು ಜಿಲ್ಲಾಧ್ಯಕ್ಷ ಪಿ.ಜಿ.ತಿಮ್ಮೇಗೌಡ ಪತ್ರ ಬರೆದಿದ್ದಾರೆ.

ರಾಜ್ಯದ ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಅಕ್ಷರ ದಾಸೋಹ ಯೋಜನೆಯಡಿ ವಿದ್ಯಾರ್ಥಿಗಳಿಗೆ ಪೂರಕ ಪೌಷ್ಟಿಕ ಆಹಾರವಾಗಿ ವಾರದಲ್ಲಿ ಆರು ದಿನಗಳ ಕಾಲ ಮೊಟ್ಟೆ ಅಥವಾ ಬಾಳೆಹಣ್ಣನ್ನು ವಿತರಿಸಲಾಗುತ್ತಿದೆ. ಪ್ರಸ್ತುತ ಇಲಾಖೆಯು ಒಂದು ಮೊಟ್ಟೆಗೆ ರೂ5.20 ಹಾಗೂ ಬಾಳೆ ಹಣ್ಣಿಗೆ ರೂ6.00 ದರವನ್ನು ನಿಗದಿಪಡಿಸಿದೆ. ಆದರೆ, ಪ್ರಸ್ತುತ ಮಾರುಕಟ್ಟೆಯಲ್ಲಿ ಒಂದು ಮೊಟ್ಟೆಯ ಬೆಲೆ ರೂ7.50 ರಿಂದ 8.0 0ರೂ.ರವರೆಗೆ ಏರಿಕೆಯಾಗಿರುವುದರಿಂದ, ಪ್ರತಿ ವಿದ್ಯಾರ್ಥಿಗೆ ಪ್ರತಿದಿನ 2 ರಿಂದ 3 ರೂಗಳವರೆಗೆ ಹೆಚ್ಚುವರಿ ವೆಚ್ಚವನ್ನು ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕರು ತಮ್ಮ ಸ್ವಂತಹಣದಿಂದ ಭರಿಸುವ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಯಾವುದೇ ರೀತಿಯಿಂದಲೂ ನ್ಯಾಯಸಮ್ಮತವಲ್ಲ ಹಾಗೂ ಆಡಳಿತಾತ್ಮಕವಾಗಿಯೂ ಸಾಕಷ್ಟು ತೊಂದರೆಗಳನ್ನು ಶಿಕ್ಷಕರು ಎದುರಿಸಬೇಕಾಗಿದೆ. ಶಿಕ್ಷಕರ ಕರ್ತವ್ಯ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡು ವು ದಾಗಿದೆ. ಆದರೆ ಇಲಾಖೆಯು ಸಮರ್ಪಕ ಅನುದಾನ ನೀಡದೆ, ಯೋಜನೆಯ ಯಶಸ್ವಿನ ಸಂಪೂರ್ಣ ಹೊಣೆಯನ್ನು ಮುಖ್ಯ ಶಿಕ್ಷಕರ ಮೇಲೆ ಹೊರಿಸಿ ರು ವುದು ಶಿಕ್ಷಕರಿಗೆ ಅನಗತ್ಯಆರ್ಥಿಕ ಮತ್ತು ಮಾನಸಿಕ ಒತ್ತಡವನ್ನುಉಂಟುಮಾಡಿದೆ. ಈ ಹಿಂದೆಯೂ ಹಲವು ಬಾರಿ ಮನವಿ ಸಲ್ಲಿಸಿದ್ದರೂ ಯಾವುದೇ ಶಾಶ್ವತ ಪರಿಹಾರದೊರೆತಿಲ್ಲ. ಇಲಾಖೆಯ ಮಹತ್ವದ ಯೋಜನೆಗೆ ತೊಂದರೆಯಾಗಬಾರದೆಂಬ ಉದ್ದೇಶದಿಂದ ಶಿಕ್ಷಕರು ತಮ್ಮ ಸ್ವಂತ ಹಣವನ್ನು ವೆಚ್ಚ ಮಾಡಿಯೋಜನೆಯನ್ನು ಮುಂದುವರಿಸಿದ್ದಾರೆ. ಆದರೆ ಈಗಿನ ಪರಿಸ್ಥಿತಿಯಲ್ಲಿ ಈ ಹೊರೆ ಭರಿಸುವುದು ಸಂಪೂರ್ಣ ಅಸಾಧ್ಯವಾಗಿದೆ.

ಆದ್ದರಿಂದ ರಾಜ್ಯ ಸಂಘವು ಈ ವಿಷಯವನ್ನು ಅತ್ಯಂತಗಂಭೀರವಾಗಿ ಪರಿಗಣಿಸಿ, ಸರಕಾರದ ಉನ್ನತ ಮಟ್ಟದಲ್ಲಿ ತಕ್ಷಣ ಚರ್ಚಿಸಿ, ಆಹಾರ ಸಾಮಗ್ರಿಗಳ ಮಾದರಿಯಲ್ಲಿಯೇ ಮೊಟ್ಟೆಯನ್ನು ಸಹ ಇಲಾಖೆಯಿಂದಲೇ ನೇರವಾಗಿ ಶಾಲೆಗಳಿಗೆ ಸರಬರಾಜು ಮಾಡಬೇಕು, ಒಂದು ಮೊಟ್ಟೆಗೆ ನೀಡಲಾಗುತ್ತಿರುವ ದರವನ್ನು ಕನಿಷ್ಠ ರೂ8. 00ಕ್ಕೆ ತಕ್ಷಣಪರಿಷ್ಕರಿಸಬೇಕು.ದರ ಪರಿಷ್ಕರಣೆ ಅಥವಾ ಸರಬರಾಜು ವ್ಯವಸ್ಥೆ ಜಾರಿ ಯಾಗುವವರೆಗೆ ಮೊಟ್ಟೆ ವಿತರಣೆಯಲ್ಲಿ ಉಂಟಾಗುವಯಾವುದೇ ವ್ಯತ್ಯಾಸಗಳಿಗೆ ಮುಖ್ಯ ಶಿಕ್ಷಕರು ಅಥವಾ ಶಿಕ್ಷಕರನ್ನು ಜವಾಬ್ದಾರರನ್ನಾಗಿ ಮಾಡಬಾರದು ರಾಜ್ಯದ ಸಾವಿರಾರು ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರು ಎದುರಿಸುತ್ತಿರುವ ಈ ಗಂಭೀರ ಸಮಸ್ಯೆಗೆ ರಾಜ್ಯ ಸಂಘವು ಆದ್ಯತೆ ನೀಡಿ ಸರಕಾರದ ಮೇಲೆ ಪರಿಣಾಮಕಾರಿ ಒತ್ತಡ ಹೇರಿ ಶೀಘ್ರ ಹಾಗೂ ಶಾಶ್ವತ ಪರಿಹಾರ ದೊರಕಿಸಿ ಕೊಡಬೇಕೆಂದು ರಾಜ್ಯಾಧ್ಯಕ್ಷರಿಗೆ ಪತ್ರದ ಮೂಲಕ ತಮ್ಮ ಮನವಿಯನ್ನು ಸಲ್ಲಿಸಿದ್ದಾರೆ.

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKANAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. CONTACT : 9901010109 GMAIL: suryapragathi2021@gmail.com.